ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 10 | ಮೇ 20, 1979 | 40 ಪೈಸೆ

ರಾಜಕೀಯ ತಿರುವು

ಚಿಕ್ಕಮಗಳೂರು ಲೋಕಸಭಾ ಚುನಾವಣೆ ಸಮಯದಲ್ಲಿ ಶ್ರೀ ದೇವರಾಜ ಅರಸ್ ಮತ್ತು ಇಂದಿರಾಗಾಂಧಿಯವರ ಮಧ್ಯೆ ವಿರಸವಿದೆಯೆಂಬ ಸುದ್ದಿ ಬಂದಿರುವಾಗ ಅರಸು ಅವರು ಅದನ್ನು ಅಲ್ಲಗಳೆದಿದ್ದರು. ಆದರೆ ಈಗ ಇಂದಿರಾ ಮತ್ತು ಅರಸು ಅವರೊಳಗಿನ ತೀವ್ರ ಭಿನ್ನಾಭಿಪ್ರಾಯವು ಇಂದಿರಾ ಕಾಂಗ್ರೆಸ್ಸನ್ನು ರಾಜ್ಯದಲ್ಲಿ (ಬಹುಶಃ ರಾಷ್ಟ್ರದಲ್ಲೂ ?) ಎರಡು ಹೋಳು ಮಾಡುವ ಹಂತಕ್ಕೆ ಬಂದಿರುವುದು ಸರ್ವ ವಿದಿತ. ಚಿಕ್ಕಮಗಳೂರು ಚುನಾವಣೆಯಲ್ಲಿ ಇಂದಿರಾಗಾಂಧಿಯವರು ಗೆದ್ದ ಮೇಲೆ "ಯಾರು ನಿಂತಿದ್ದರೂ ಗೆಲ್ಲುತ್ತಿದ್ದರು. ಓಟು ದೊರೆತದ್ದು ಕಾಂಗ್ರೆಸ್ಸಿನ ಕಾರ್ಯಕ್ರಮಗಳಿಗೆ" ಎಂಬುದಾಗಿ ಅರಸು ಅವರು ಹೇಳಿದ್ದನ್ನು ಇಲ್ಲಿ ನೆನಪಿಗೆ ತರಬಹುದು. ಇಂದಿರಾ ಗಾಂಧಿಯ ಸರ್ವಾಧಿಕಾರ, ಮತ್ತೆ ಸಂಜಯ ಗಾಂಧಿ ದುಷ್ಟ ಕೂಟವನ್ನು ಮೇಲಕ್ಕೆತ್ತುವ ಪ್ರಯತ್ನಗಳ ವಿರುದ್ಧ ನಡೆಸುವ ಹೋರಾಟವು ಈಗಿನ ಅರಸು-ಇಂದಿರಾ ವಿರಸಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಏನಿದ್ದರೂ, ಇಂದಿರಾಗಾಂಧಿಯವರ ಪ್ರಭಾವ, ಅಧಿಕಾರ ವ್ಯಾಪ್ತಿಗಳೆಲ್ಲಾ ಕುಗ್ಗಿ ಹೋಗಿವೆ. ದೆಹಲಿಯಲ್ಲಿ ವಿಶೇಷ ನ್ಯಾಯಾಲಯ ಮಸೂದೆ ವಿರುದ್ಧ ನಡೆಸಿದ ಮತಪ್ರದರ್ಶನದಲ್ಲಿ ಕಡಿಮೆ ಜನ ಭಾಗವಹಿಸಿದ್ದರಿಂದಲೂ ಇಂದಿರಾ

ಸಂಪಾದಕೀಯ

ಗಾಂಧಿಯ ಕುಗ್ಗುತ್ತಿರುವ ಪ್ರಭಾವ ಸ್ಪಷ್ಟ. ಆದರೆ ಈ ಸರ್ವಾಧಿಕಾರಿಣಿಯ ಭಯ ತಪ್ಪಿತೆಂದು ತಿಳಿದರೆ ತಪ್ಪು.

ಜನತಾಪಕ್ಷವು ಅಧಿಕಾರಕ್ಕೆ ಬಂದು ಎರಡುವರ್ಷಗಳು ಕಳೆದರೂ ಜನರ ಪರಿಸ್ಥಿತಿ ಏನೂ ಸುಧಾರಿಸಿಲ್ಲ, ಬದಲು ಇನ್ನೂ ಹಾಳಾಗಿದೆ. ಆರ್. ಎಸ್. ಎಸ್. ನಂತಹ ಜಾತೀಯ ಮತ್ತು ಕೋಮುವಾದಿ ಶಕ್ತಿಗಳು ಇಂದು ಸಮಾಜಿಕ ಜೀವನವನ್ನು ಅಸ್ತವ್ಯಸ್ಥಗೊಳಿಸುತ್ತಲಿವೆ. ಕೆಲವೇ ದಿನಗಳ ಹಿಂದೆ ಜೆಮ್‌ಶೆದ್‌ಪುರದಲ್ಲಿ ನಡೆದ ಹಿಂಸಾಚಾರಗಳಿಂದ ಆರ್. ಎಸ್. ಎಸ್. ನಿಂದ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆಗಳಿಗಿರುವ ಅಪಾಯವು ಸ್ಪಷ್ಟವಾಗುತ್ತಿದೆ. ಜನತಾಪಕ್ಷವೂ ಸೇರಿ, ಎಲ್ಲಾ ಪಕ್ಷಗಳ ಪ್ರತಿನಿಧಿಗಳ ತಂಡವು ಜಮ್‌ಶೆದ್‌ಪುರಕ್ಕೆ ಹೋಗಿ ಪರಿಸ್ಥಿತಿಯನ್ನು ಪರಿಶೀಲಿಸಿದಾಗ "ಆರ್. ಎಸ್. ಎಸ್. ನ ಕುಟಿಲ ಯೋಜನೆ"ಯಿಂದಲೇ ಹಿಂಸಾಚಾರ ನಡೆಯುವಂತಾಯಿತೆಂದು, ಸರ್ವಾನುಮತದಿಂದ ಅಭಿಪ್ರಾಯ ಮಾಡಲಾಗಿದೆ. ಆಳಿಗರ

[ಕೊನೆಯ ಪುಟನೋಡಿ]

ದುಡಿಯುವ ಮಹಿಳೆಯರ

ಬೇಡಿಕೆ ದಿನಾಚರಣೆಗೆ ಕರೆ

ಮೇ ಮೂವತ್ತರಂದು ದುಡಿಯುವ ಮಹಿಳೆಯರ ಬೇಡಿಕೆ ದಿನಾಚರಣೆಯನ್ನು ರಾಷ್ಟ್ರದಾದ್ಯಂತ ಆಚರಿಸಲು ಸಿ. ಐ. ಟಿ. ಯು. ನೇತೃತ್ವದಲ್ಲಿ ನಡೆದ ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶವು ನಿರ್ಣಯಿಸಿತ್ತು. ಕರ್ನಾಟಕ ರಾಜ್ಯದ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ಏಪ್ರಿಲ್ 6 ರಂದು ಬೆಂಗಳೂರಿನಲ್ಲಿ ಸೇರಿ, ಈ ನಿರ್ಣಯವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ತೀರ್ಮಾನಿಸಿತು. ರಾಷ್ಟ್ರೀಯ ಸಮಾವೇಶ ಮತ್ತು ರಾಜ್ಯ ಸಮಾವೇಶಗಳಲ್ಲಿ ಅಂಗೀಕರಿಸಲ್ಪಟ್ಟ ದುಡಿಯುವ ಮಹಿಳೆಯರ ಇಪ್ಪತ್ತು ಬೇಡಿಕೆಗಳನ್ನು ಪಡೆಯಲು ಮುಂದೆ ನಡೆಸತಕ್ಕ ಸಂಘಟಿತ ಹೋರಾಟದ ಮೊದಲ ಹಂತ ಮೇ ಮೂವತ್ತರ ಬೇಡಿಕೆ ದಿನಾಚರಣೆ. ಮೇ ಮೂವತ್ತರಂದು ರಾಜ್ಯದಾದ್ಯಂತ ಸಭೆ, ಮೆರವಣಿಗೆ, ವಿಚಾರಗೋಷ್ಠಿಗಳನ್ನು ನಡೆಸಬೇಕೆಂದೂ, ಬೇಡಿಕೆಗಳನ್ನು ಸರಕಾರದ ಮುಂದಿಡಬೇಕೆಂದೂ ತೀರ್ಮಾನಿಸಲಾಯ್ತು. ಅಂದು ಬೆಂಗಳೂರಿನಲ್ಲಿ ವಿಚಾರಗೋಷ್ಠಿಯನ್ನು ನಡೆಸುವುದು, ದುಡಿಯುವ ಮಹಿಳೆಯರು ಬೃಹತ್ ಮೆರವಣಿಗೆ ಮೂಲಕ ಹೋಗಿ ರಾಜ್ಯಪಾಲರಿಗೆ ಮನವಿಯನ್ನು ಅರ್ಪಿಸುವುದು ಮೊದಲಾದ ಕಾರ್ಯಕ್ರಮಗಳನ್ನು ಜರುಗಿಸಲು ತೀರ್ಮಾನಿಸಲಾಗಿದೆ. ರಾಜ್ಯದ ಬೇರೆಬೇರೆ ಕಡೆಗಳಲ್ಲಿ ಪ್ರದೇಶದಲ್ಲಿನ ಉನ್ನತ ರೆವಿನ್ಯೂ ಅಧಿಕಾರಿಗೆ ಮನವಿಯನ್ನು ಕೊಡಲೂ ತೀರ್ಮಾನಿಸಲಾಗಿದೆ.

ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡುವ, ದಿನಕ್ಕೆ ಎಂಟು ಗಂಟೆ ಕೆಲಸದ, ದುಡಿಯುತ್ತಿರುವ ಮಹಿಳೆಯರಿಗೆ ಸಮಾನ ಕೆಲಸಕ್ಕೆ ಪುರುಷರೊಡನೆ ಸಮಾನ ವೇತನ ಸಿಗಬೇಕೆನ್ನುವ, ದುಡಿಯುವ ಮಹಿಳೆಯರಿಗೆ ಕೆಲಸದ ಭದ್ರತೆ ಬೇಕೆನ್ನುವ, ದುಡಿಯುವ ಮಹಿಳೆಯರಿಗೆ ಅನುಕೂಲವಾಗುವಂತೆ ಲೇಬರ್ ಕಾನೂನುಗಳಲ್ಲಿ ಬದಲಾವಣೆಯಾಗಬೇಕೆನ್ನುವ, ದುಡಿಯುವ ಮಹಿಳೆಯರ ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರ ಒದಗಿಸಬೇಕೆನ್ನುವ, ಮಹಿಳೆಯರಿಗೆ ಕಾರ್ಮಿಕ ಸಂಘಟನೆಗಳಲ್ಲಿ ಪ್ರಾತಿನಿಧ್ಯಬೇಕೆನ್ನುವ ಇವೇ ಇತ್ಯಾದಿ ಬೇಡಿಕೆಗಳು 20 ಬೇಡಿಕೆಗಳಲ್ಲಿ ಸೇರಿವೆ.

ಪ್ರಾಂತ ರೈತ ಸಂಘದ 6ನೇ ರಾಜ್ಯ ಸಮ್ಮೇಳನ

ಹಳ್ಳಿಯ ಬಡವರ ಬಲಿಷ್ಟ ಸಂಘಟನೆ, ಹೋರಾಟಕ್ಕೆ ಕರೆ

ಆಳುವ ವರ್ಗಗಳು ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತಲಿರುವ ಪರಿಣಾಮವಾಗಿ ಒಂದೆಡೆ ಮಾರುಕಟ್ಟೆಯ ಮತ್ತು ಬಂಡವಾಳಶಾಹಿಗಳಿಂದಲೂ, ಇನ್ನೊಂದೆಡೆ ಹಳೆಯ ಭೂಮಿ ಸಂಬಂಧಗಳಿಂದಲೂ ದಿನೇದಿನೇ ಹಳ್ಳಿಯ ಬಡವರು ಇನ್ನೂ ಬಡವರಾಗುತ್ತಲಿರುವರು. ಹಳ್ಳಿಯ ಬಡವರ ಬಲಿಷ್ಟ ಸಂಘಟನೆ, ಸತತ ಹೋರಾಟಗಳು ಸಾಕಷ್ಟು ಇರದೆ ಇರುವುದರಿಂದ ರಾಜ್ಯದಲ್ಲಂತೂ ಭ್ರಮೆ ಮತ್ತು ಮೋಸಕ್ಕೊಳಗಾಗಿ ಹಳ್ಳಿಯ ಬಡವರು ತತ್ತರಿಸುವಂತಾಗಿದೆ. ಆಳುವವರ್ಗಗಳು ಒಂದೆಡೆ ಹಳ್ಳಿಯ ಬಡವರ ಉದ್ಧಾರದ ಸೋಗು ಹಾಕುತ್ತಲಿದ್ದರೆ, ಇನ್ನೊಂದೆಡೆ ಶ್ರೀಮಂತ ಕೃಷಿಕರ ಸಂಘಟನೆಯ ಪ್ರಯತ್ನಗಳೂ ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತಸಂಘದ ಆರನೇ ರಾಜ್ಯ ಸಮ್ಮೇಳನವು ಮಂಗಳೂರಿನಲ್ಲಿ ಮೇ 12, 13 ಮತ್ತು 14 ರಂದು ಜರುಗಿತು.

ಸುಮಾರು ಇಪ್ಪತ್ತು ಸಹಸ್ರ ಸದಸ್ಯತ್ವವನ್ನು ಮತ್ತು ಹದಿನೈದು ಜಿಲ್ಲೆಗಳನ್ನು ಪ್ರತಿನಿಧೀಕರಿಸುವ 102 ಮಂದಿ ಪ್ರತಿನಿಧಿಗಳು, 30 ಮಂದಿ ವೀಕ್ಷಕರು ಮತ್ತು ಅನೇಕ ಸೌಹಾರ್ದ ಪ್ರತಿನಿಧಿಗಳಿಂದ ಸೇರಿದ್ದ ಸಮ್ಮೇಳನವು ಹಿರಿಯ ಮುಂದಾಳು ಕಾಂ. ಕೊರಗಪ್ಪ ರೈಯವರು ಧ್ವಜಾರೋಹಣ ಮಾಡುವುದರೊಂದಿಗೆ ಪ್ರಾರಂಭವಾಯಿತು. ಕಾಮ್ರೇಡ್ ಕೃಷ್ಣಶೆಟ್ಟಿ ನಗರದಲ್ಲಿ ಸೇರಿದ್ದ ಸಮ್ಮೇಳನಕ್ಕೆ ಹಿರಿಯ ರೈತ ಮುಂದಾಳುಗಳಾದ ಕಾಂ. ಎಚ್. ಮುಗವಾಳಪ್ಪ, ಕಾಂ. ಕೆ. ವಿ. ರಾವ್ ಮತ್ತು ಕಾಂ. ಎಚ್. ಸಿ. ಚೆನ್ನಪ್ಪ ಇವರ ಅಧ್ಯಕ್ಷ ಮಂಡಳಿಯನ್ನು ಆರಿಸಲಾಯ್ತು. ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಅಬ್ರಹಾಮ್ ಕರ್ಕಡರಿಂದ ಸ್ವಾಗತ ಭಾಷಣವಾದ ಮೇಲೆ ರಾಜ್ಯದ ಹಿರಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಎನ್. ಎಲ್. ಉಪಾಧ್ಯಾಯರಿಂದ ಉದ್ಘಾಟನೆಯಾಯಿತು. ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ನಡೆದ ಅನೇಕ ಧೀರೋಧಾತ್ತ ಹೋರಾಟಗಳನ್ನು ನೆನಪಿಗೆ ತರುತ್ತಾ, ರೈತರ ಸಮಸ್ಯೆಗಳು ನಿಜವಾಗಿಯೂ ತೀರಬೇಕಾದರೆ ರೈತ ಮತ್ತು ಕಾರ್ಮಿಕರ ಸರಕಾರವೇ ಅಧಿಕಾರಕ್ಕೆ ಬರುವಂತಾಗಬೇಕೆಂದರು. ರಾಜ್ಯದಲ್ಲೂ ಹೋರಾಟದ ದಿವ್ಯ ಪರಂಪರೆಯಿದೆ. ಇಂದು ಹಿಂದಿನ ಅನುಭವ ಮತ್ತು ಹೊಸ ಪರಿಸ್ಥಿತಿಯನ್ನು ಅಂದಾಜು ಮಾಡಿ ಬಲಿಷ್ಟ ಸಂಘಟನೆ ಬೆಳೆಸಲು ಮತ್ತು ಹೋರಾಡಲು ಕಾಂ. ಉಪಾಧ್ಯಾಯ ಕರೆಯಿತ್ತರು.

ರಾಜ್ಯ ರೈತ ಸಂಘದ ಸಂಚಾಲಕ ಕಾಂ. ಪಿ. ರಾಮಚಂದ್ರರಾವ್ ಅವರು ಲಿಖಿತ ವರದಿಯನ್ನು ಮಂಡಿಸಿದರು. ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ಮಾತನಾಡುತ್ತಾ ಇಂದು ಪಶ್ಚಿಮ ಬಂಗಾಲ, ತ್ರಿಪುರಾ ರಾಜ್ಯಗಳಲ್ಲಿ ಹಳ್ಳಿಯ ಬಡವರಿಗೆ ಅನುಕೂಲವಾಗಿರುವ ಎಡಪಕ್ಷಗಳ ಸರಕಾರವಿದ್ದು, ನಮಗೆಲ್ಲಾ ಸ್ಫೂರ್ತಿದಾಯಕವಾಗಿದೆ ಎಂದರು. ರಾಜ್ಯದಲ್ಲಿನ ಹಳ್ಳಿಯ ಬಡವರ ಬಗ್ಗೆ ಅಂಕಿ ಸಂಖ್ಯೆಗಳನ್ನು ಇತ್ತು, ಕಾಂಗ್ರೆಸ್ ಸರಕಾರದ ಬಡವರ ಉದ್ಧಾರದ ಘೋಷಣೆ ಎಷ್ಟು ಪೊಳ್ಳೆಂದು ವಿವರಿಸಿದರು. ರಾಜ್ಯದಲ್ಲಿ ಹಿಂದೆ ರೈತ ಸಂಘಟನೆ ಬಲಯುತವಾಗಿ ಬೆಳೆಯುತ್ತಲಿದ್ದು, ಹಿಂದಿನ ಮುಖಂಡತ್ವದ ತಪ್ಪು ಧೋರಣೆ ಮತ್ತು ಹೋರಾಟದ ಪಥಕ್ಕೆ ತಿಲಾಂಜಲಿಯನ್ನಿತ್ತಿದ್ದರ ಪರಿಣಾಮ ಸಂಘಟನೆ ದುರ್ಬಲವಾಗಿದೆ ಎಂದು ವಿವರಿಸಿದರು. ಇಪ್ಪತ್ತು ಬೇಡಿಕೆಗಳನ್ನು ಮುಂದಿಟ್ಟ ವರದಿಯಲ್ಲಿ ರೈತ-ಕಾರ್ಮಿಕರ ಸಖ್ಯತೆ ಬಗ್ಗೆಯೂ, ಸಾಮಾಜಿಕವಾಗಿ ಕೆಳತಳ್ಳಲ್ಪಟ್ಟವರನ್ನು ಸಂಘಟಿಸಿ ಮುಂದಾಳುತ್ವಕ್ಕೆ ತರುವುದರ ಬಗ್ಗೆ ಆದ್ಯತೆಯೀಯಲು ಕರೆಯಿತ್ತರು.

ಎರಡು ದಿನಗಳ ಪ್ರತಿನಿಧಿ ಅಧಿವೇಶನದಲ್ಲಿ ವರದಿಯ ಮೇಲೆ 27 ಮಂದಿ ಚರ್ಚೆಯಲ್ಲಿ ಭಾಗವಹಿಸಿದರು. ಹಳ್ಳಿಯ ಅತೀ ಬಡವರು, ಅಂದರೆ ಬಡ ಮತ್ತು ಮಧ್ಯಮ ರೈತರು, ಭೂರಹಿತ ಕೃಷಿ ಕೂಲಿಗಾರರು, ಸಾಮಾಜಿಕವಾಗಿ ಕೆಳತಳ್ಳಲ್ಪಟ್ಟವರು ಮುಂತಾದವರನ್ನೇ ಆಧರಿಸಿ ಸಂಘಟಿಸಬೇಕೆಂದೂ, ಸತತ ಹೋರಾಟ ನಡೆಸಬೇಕೆಂದೂ ಸೂಚನೆಗಳನ್ನು ಹೆಚ್ಚಿನವರಿತ್ತರು.

ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅಖಿಲಭಾರತ ಕಿಸಾನ್ ಸಭೆಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯರಾದ ಕಾಂ. ಚಾತುನ್ನಿ ಮಾಸ್ಟರ್ ಅವರು ಹಿಂದಿನ ಕಾಂಗ್ರೆಸ್ ಸರಕಾರ ಮತ್ತು ಇಂದು ಕೇಂದ್ರದಲ್ಲಿರುವ ಜನತಾಪಕ್ಷ ಸರಕಾರಗಳ ವರ್ಗಧೋರಣೆ ಒಂದೇ ಎಂದರು. ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುವುದರ ಪರಿಣಾಮ ಬಡರೈತರು ದಿವಾಳಿಯಾಗುತ್ತಲಿದ್ದಾರೆ; ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆಯಿಲ್ಲ ಆದರೆ ಅವರು ಕೊಳ್ಳುವ ವಸ್ತುಗಳು ದುಬಾರಿ. ರಾಷ್ಟ್ರದಾದ್ಯಂತ ಕೃಷಿಕೂಲಿಗಾರರ ಪರಿಸ್ಥಿತಿಯ ದಾರುಣ ಚಿತ್ರವನ್ನು ವಿವರಿಸಿ, ಕೇರಳ, ಬಂಗಾಲದಂತಲ್ಲಿ ಇವರ ಬಲಿಷ್ಟ ಸಂಘಟನೆ ಮತ್ತು ಹೋರಾಟಗಳು ಬೆಳೆದು ಬಂದುದರ ಪರಿಣಾಮವಾಗಿ ಸ್ವಲ್ಪ ಹೆಚ್ಚಿನ ನ್ಯಾಯ ದೊರೆಯುತ್ತಿದೆ ಎಂದರು. ಸಾಮ್ರಾಜ್ಯಶಾಹಿ ಮತ್ತು ಊಳಿಗಮಾನ್ಯ ಜಮೀನ್ದಾರಿ ಪದ್ಧತಿಗಳ ವಿರುದ್ಧ ರೈತರ ಹೋರಾಟ ನಡೆಸಿದ, ಸಹಸ್ರಾರು ಮಂದಿಯನ್ನು ತ್ಯಾಗ ಮಾಡಿದ ಅಖಿಲ ಭಾರತ ಕಿಸಾನ್‌ಸಭಾದ ನೇತೃತ್ವದಲ್ಲಿ ಕರ್ನಾಟಕದಲ್ಲೂ

[ಕೊನೆಯ ಪುಟ ನೋಡಿ]

Editorial and managerial office : 1-56 K. V. Temple street, Sultanpet, Bangalore

ರಾಜ್ಯದ ವಿವಿಧ ಕಡೆಗಳಲ್ಲಿ ಮೇ ದಿನಾಚರಣೆ

ಕಾರ್ಮಿಕರ ಐಕ್ಯತೆಯ ದಿನವಾದ ಮೇ ಒಂದನೇ ತಾರೀಕು ರಾಜ್ಯದ ವಿವಿಧ ಸಂಘಸಂಸ್ಥೆಗಳಿಗೆ ಸೇರಿದ ಕಾರ್ಮಿಕರಿಗೆ ಮಹತ್ವದ ದಿನವಾಗಿತ್ತು. ತಮ್ಮ ವರ್ಗಐಕ್ಯತೆ, ಧ್ಯೇಯ ಸಾಧನೆಗಳ ಸಂಕೇತವಾದ ಈ ದಿನವನ್ನು ಕಾರ್ಮಿಕರು ಒಗ್ಗಟ್ಟು ವೈಭವಗಳಿಂದ ಆಚರಿಸಿದರು.

ಬೆಂಗಳೂರು

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ನಡೆದ ಸಿ. ಐ. ಟಿ. ಯು. ನೇತೃತ್ವದ ಮೇ ದಿನಾಚರಣೆ ಚರಿತ್ರಾರ್ಹವಾಗಿತ್ತು. ಸಿ. ಐ. ಟಿ. ಯು. ಮತ್ತಿತರ ಕಾರ್ಮಿಕ ಸಂಘಟನೆಗಳು ಸಂಯುಕ್ತವಾಗಿ ನಡೆಸಿದ ಮೇ ದಿನಾಚರಣೆಯು ಸಹಸ್ರಾರು ಹೋಟೆಲ್ ಕಾರ್ಮಿಕರ ಬೇಡಿಕೆ ಮತ್ತು ಹೋರಾಟಕ್ಕೆ ಬೆಂಬಲದ ಸಂಕೇತವಾಗಿತ್ತು. ಮೈಕೋ ಕಾರ್ಮಿಕರ ಯಶಸ್ವಿ ಹೋರಾಟದ ಹಿನ್ನೆಲೆಯಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಸಹಸ್ರಾರು ಕಾರ್ಮಿಕರು ಭಾಗವಹಿಸಿದ್ದರು. ಮಾಂಸಾಹಾರಿ ಹೋಟೆಲುಗಳಲ್ಲಿ ದುಡಿಯುವ ನೂರಾರು ಕಾರ್ಮಿಕರು ಎಂಟುಗಂಟೆ ಕೆಲಸ, ಕೆಲಸದ ಭದ್ರತೆ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಅಂದು ಕೆಲಸಕ್ಕೆ ಹಾಜರಾಗದೆ ನಗರದ 300ಕ್ಕಿಂತಲೂ ಹೆಚ್ಚು ಮಾಂಸಾಹಾರಿ ಹೋಟೆಲುಗಳನ್ನು ಮುಚ್ಚುವಂತೆ ಮಾಡಿದ್ದರು. ತುಂಬಿತುಳುಕುತ್ತಿದ್ದ ಮೆರವಣಿಗೆಯಲ್ಲಿ ಮೈಕೊ ಕಾರ್ಮಿಕರು, ಸಾರ್ವಜನಿಕ ಕ್ಷೇತ್ರ ಮತ್ತು ಇತರ ಕಾರ್ಖಾನೆಗಳ ಕಾರ್ಮಿಕರು ಇದ್ದರು. ಕಬ್ಬನ್ ಪಾರ್ಕಿನಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಕಾಂ. ಎಸ್. ಸೂರ್ಯನಾರಾಯಣರಾವ್ ಕಾಂ. ಎನ್. ಎಲ್. ಉಪಾಧ್ಯಾಯ, ಕಾಂ. ವಿ. ಜೆ. ಕೆ. ನಾಯರ್ ಮೊದಲಾದವರು ಮಾತನಾಡಿದರು.

ಮೈಸೂರು

ಮೈಸೂರಿನ ಗಾಂಧಿನಗರದಲ್ಲಿ ಮೈಸೂರು ಜಿಲ್ಲಾ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಕಾಂ. ಎಂ. ಎನ್. ಉಗ್ರಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕಾರ್ಮಿಕ ಮುಂದಾಳುಗಳಾದ ಸಯ್ಯದ್ ಕರೀಂ, ಸಯ್ಯದ್ ಅಲಿ, ಸಿ. ಕೆ. ಮೋಸ್, ಕೆ. ತಿಮ್ಮೇಗೌಡ ಮೊದಲಾದವರು ಮಾತನಾಡಿ ಮೇ ದಿನದ ಮಹತ್ವವನ್ನು ವಿವರಿಸಿ, ವಿಶಾಲ ತಳಹದಿಯ ಮೇಲೆ ಎಲ್ಲ ಕಾರ್ಮಿಕರೂ ಸಂಘಟಿತರಾಗಿ ಹೋರಾಡಲು ಮನವಿ ಮಾಡಿಕೊಂಡರು. ಸ್ತ್ರೀ ಕಾರ್ಮಿಕರೂ ಅಧಿಕಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೈಸೂರಿನ ಅಶೋಕಪುರಂನಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನಾ ಕೇಂದ್ರದ ಕಾರ್ಮಿಕರೂ ಮೇ ದಿನದ ಅಂಗವಾಗಿ ಬಹಿರಂಗ ಸಭೆ ಏರ್ಪಡಿಸಿದ್ದರು. ಕಾಂ. ಸಿ. ಕೆ. ಮೋಸ್, ರೈಲ್ವೆ ಕಾರ್ಮಿಕ ಮುಂದಾಳು, ಕಾಂ. ವೆಂಕಟೇಶ್ ಮತ್ತು ಜನತಾಪಕ್ಷದ ಶ್ರೀನಿವಾಸ ಪ್ರಸಾದ್ ಇವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಎನ್. ಉಗ್ರಪ್ಪ ವಹಿಸಿದ್ದರು.

ದೊಡ್ಡಬಳ್ಳಾಪುರ

ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರದ ಸಿ. ಐ. ಟಿ. ಯು. ಶಾಖೆಯ ಆಶ್ರಯದಲ್ಲಿ ಮೇ ದಿನಾಚರಣೆ ಮತ್ತು ಬಹಿರಂಗ ಸಭೆ ನಡೆಯಿತು. ಕಾಂ. ಎಚ್. ಮುಗುವಾಳಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಎಂ. ಕೃಷ್ಣಮೂರ್ತಿ ಮತ್ತು ಕಾಂ. ಸಿ. ರಾಮಭದ್ರಯ್ಯ ಅವರು ಐಕ್ಯಹೋರಾಟ ಮತ್ತು ಸಿ. ಐ. ಟಿ. ಯು. ಸ್ಥಾಪನೆ. ಉದ್ದೇಶಗಳ ಬಗ್ಗೆ ಮಾತನಾಡಿದರು. ಕಾಂ. ಡಿ. ಎಂ. ಕೃಷ್ಣಮೂರ್ತಿ. ವೀರಣ್ಣ ಮುಂತಾದವರು ಮಾತನಾಡಿದ ನಂತರ, ಮೈಕೋ, ಹೋಟೆಲ್ ಮತ್ತು ಪೌರಕಾರ್ಮಿಕರ ಹೋರಾಟಗಳಿಗೆ ಬೆಂಬಲ ಸೂಚಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಧಾರವಾಡ

ಧಾರವಾಡದಲ್ಲಿ ಮೇ ದಿನದ ಅಂಗವಾಗಿ ಕಾರ್ಮಿಕರು, ಕೃಷಿಕಾರ್ಮಿಕರು ಎಲ್. ಐ. ಸಿ.-ಬ್ಯಾಂಕ್‌ನೌಕರರು, ದಲಿತ ಹೋರಾಟಗಾರರು ಮತ್ತು ವಿದ್ಯಾರ್ಥಿಗಳನ್ನೊಳಗೊಂಡ ಮೆರವಣಿಗೆ ನಡೆಯಿತು. ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ದೇಶಪಾಂಡೆಯವರು ವಹಿಸಿದ್ದರು. ಕಾಂ. ಯಡೂರ ಮಹಾಬಲ ಅವರು ಸ್ವಾಗತಿಸಿ ಮೇ ದಿನ, ಮಹತ್ವ ಹೇಳಿದರು. ಎಲ್. ಐ. ಸಿ. ಯ ಶಂಕರ, ಎಸ್. ಜಿ. ಐ. ನ ಕುಲಕರ್ಣಿ, ಕರ್ನಾಟಕ ವಿ. ವಿ. ಶಿಕ್ಷಕೇತರ ಸಂಘದ ವಾಂಟಮೂರೆ, ಆಗ್ರೋ ಇಂಡಸ್ಟ್ರೀಸ್‌ನ ಕೃಷ್ಣಪ್ಪ, ಟೈವಾಕ್ ಯೂನಿಯನ್‌ನ ವಸ್ತ್ರದ, ಹಮಾಲರ ಸಂಘದ ವಿರೂಪಾಕ್ಷಪ್ಪ, ಬ್ಯಾಂಕ್ ಯೂನಿಯನ್‌ನ ಎ. ಜಿ. ರಾವ್, ಯುವಜನ ಕ್ರಾಂತಿದಳದ ಜಿ. ಎ. ಹಿರೇಮಠ, ಕೃಷಿ ಕಾರ್ಮಿಕರ ಸಂಘದ ಕುಂಬಾರ, ದಲಿತ ಸಂಘದ ವಿಜಯಾ ಪಾಟೀಲ, ಎಸ್. ಎಫ್. ಐ. ನ ಹಿರೇಮಠ, ಬಂಡಾಯ ಸಾಹಿತ್ಯ ಮತ್ತು ಸಮುದಾಯದ ನಾಗರಾಜ ಇವರು ಮಾತನಾಡಿದರು.

ಪುತ್ತೂರು

ದ. ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿರುವ ಹಲವಾರು ಕಾರ್ಮಿಕಸಂಘಗಳು ಒಟ್ಟಾಗಿ ಕಾರ್ಮಿಕ ಕ್ರಿಯಾವೇದಿಕೆಯ ಆಶ್ರಯದಲ್ಲಿ ಮೇ ದಿನಾಚರಣೆ ನಡೆಸಿ ಸಭೆಯ ಅಧ್ಯಕ್ಷತೆಯನ್ನು ಶ್ರೀ ದಿನಕರ ರೈ ಅವರು ವಹಿಸಿದ್ದರು. ಸಿ. ಐ. ಟಿ. ಯು., ಎಲ್. ಐ. ಸಿ., ಬ್ಯಾಂಕ್, ಕೆ.ಎಸ್.ಆರ್.ಟಿ.ಸಿ., ರೈಲ್ವೆ, ದಲಿತ ಸಂಘರ್ಷ ಸಮಿತಿ ಮುಂತಾದ ಸಂಸ್ಥೆಗಳ ಮುಂದಾಳುಗಳು ಸಭೆಯಲ್ಲಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಶ್ರೀ ಅನಂತಸುಬ್ಬರಾವ್ ಅವರು ಬಂದಿದ್ದರು.

ಕುಂದಾಪುರ

ದ. ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಮೇ ದಿನದ ಬೃಹತ್ ಸಭೆ ನಡೆಯಿತು. ನೆಲ್ಲಿಕಟ್ಟೆ, ಗುಲ್ವಾಡಿ, ಗಂಗೊಳ್ಳಿ ಮತ್ತಿತರ ಭಾಗಗಳಿಂದ ಬಹುಸಂಖ್ಯೆಯಲ್ಲಿ ರೈತ ಕಾರ್ಮಿಕರು, ಹಾಗೂ ರಿಕ್ಷಾ ಚಾಲಕರು ಮೆರವಣಿಗೆಯಲ್ಲಿ ಸಭೆಗೆ ಬಂದಿದ್ದರು. ಆರಂಭದಲ್ಲಿ ಕಾಂ. ಸಿ. ನಾರಾಯಣ ಅವರು ಸ್ವಾಗತಿಸಿ ಮೇ ದಿನದ ಮಹತ್ವ ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಡೇವಿಡ್ ಕರ್ಕಡ ಅವರು ವಹಿಸಿದ್ದರು.

ಸಾಸ್ತಾನ

ದ. ಕನ್ನಡ ಜಿಲ್ಲೆ ಉಡುಪಿ ತಾಲ್ಲೂಕಿನ ಸಾಸ್ತಾನದಲ್ಲಿ ಮೇ ದಿನದ ಅಂಗವಾಗಿ ಬೃಹತ್ ಸಭೆ ನಡೆಯಿತು. ಮೊದಲು ಹಂಗಾರಕಟ್ಟೆಯಿಂದ ಬಹುಸಂಖ್ಯೆಯ ಪ್ಲೈವುಡ್ ಮತ್ತು ಹಂಚಿನ ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಸೇರಿದರು. ಕಾಂ. ವಿಠಲ್ ಅವರು ಸ್ವಾಗತಿಸಿದರು. ಕಾಂ. ಎ. ಎಸ್. ಆಚಾರ್ಯ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ರೈತ ಕಾರ್ಮಿಕ ಮುಂದಾಳು ಕಾಂ. ಶೀರ ಅವರು ಮಾತನಾಡಿ ಸಮಾಜದ ಸಮಸ್ಯೆಗಳನ್ನು ವಿವರಿಸಿದರು.

ಸುಳ್ಯ

ದ. ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಮೇ ದಿನಾಚರಣೆಯು ಕಾರ್ಮಿಕರ ಹೋರಾಟಕ್ಕೆ ನಾಂದಿಯಾಯಿತು. ನೂರಾರು ರಬ್ಬರ್ ತೋಟದ ಕೆಲಸಗಾರರು ಮತ್ತು ಇತರ ಶ್ರಮಜೀವಿಗಳು ಬೃಹತ್ ಮೆರವಣಿಗೆ ನಡೆಸಿದ ನಂತರ ಸಾರ್ವಜನಿಕ ಸಭೆ ನಡೆಯಿತು. 13.000 ಸಾವಿರ ಎಕರೆಗಳಿಗಿಂತಲೂ ಹೆಚ್ಚಾಗಿರುವ ರಬ್ಬರ್ ತೋಟಗಳಲ್ಲಿ ಆ ದಿನ ಕೆಲಸ ಸ್ಥಗಿತಗೊಂಡಿತ್ತು.

ಬಿಜಾಪುರ

ಮೇ ದಿನಾಚರಣೆಯ ನಿಮಿತ್ತ ಬಿಜಾಪುರದಲ್ಲಿ ನಗರಸಭೆ, ನೂಲಿನ ಗಿರಣಿ ಕಾರ್ಮಿಕರು ಬೆಳಿಗ್ಗೆ ಮೆರವಣಿಗೆ ನಡೆಸಿ, ತಮ್ಮ ಬೇಡಿಕೆಗಳಿಗಾಗಿ ಅನ್ನ ಸತ್ಯಾಗ್ರಹ ಕೈಗೊಂಡಿರುವ ಪೌರಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿದರು. ಸಂಜೆ ನಡೆದ ಸಭೆಯಲ್ಲಿ ಕಾಂ. ಎನ್. ಕೆ. ಉಪಾಧ್ಯಾಯ, ಎಲ್. ಬಿ. ಲಾಯದಗುಂದಿ, ಡಿ. ಎಂ. ಖಲಾನಿ ಮೊದಲಾದವರು ಭಾಷಣ ಮಾಡಿದರು. ಕೆ.ಎಸ್.ಆರ್.ಟಿ.ಸಿ. ಬಸ್ ದರ ಏರಿಕೆಯನ್ನು ಖಂಡಿಸುವ ಮತ್ತು ಶಾಲಾಶಿಕ್ಷಕರ, ದವಾಖಾನೆ, ನಗರಸಭೆ, ನೀರು ಪೂರೈಕೆ ಕೆಲಸಗಾರರ ಮುಷ್ಕರವನ್ನು ನಿಷೇಧಿಸುವ ಮಸೂದೆಯನ್ನು ಖಂಡಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಪೈವಳಿಕೆ

ಕಣ್ಣಾನೂರು ಜಿಲ್ಲೆ ಕಾಸರಗೋಡು ತಾಲ್ಲೂಕಿನ ಪೈವಳಿಕೆಯಲ್ಲಿ ಮೆರವಣಿಗೆ ನಡೆಸಿ ಮೇ ದಿನವನ್ನು ಆಚರಿಸಲಾಯಿತು. ಸಭೆಯಲ್ಲಿ ಕಾಂ. ಎ. ವಿ. ರೈಮಾನ್ ಮಾಸಾರ ಅವರು ಮೇ ದಿನದ ಪ್ರಾಮುಖ್ಯತೆಯನ್ನು ವಿವರಿಸಿದರು. ಕಾಂ. ವಿಶ್ವನಾಥಶೆಟ್ಟಿ ವಂದನಾರ್ಪಣೆಗಳನ್ನು ಸಲ್ಲಿಸಿದರು.

ತುಮಕೂರು

ತುಮಕೂರಿನ ಬೀಡಿ ಕೆಲಸಗಾರರ ಸಂಘದ ಕಚೇರಿಯಲ್ಲಿ ಸುಭ್ರಮದಿಂದ ಮೇ ದಿನಾಚರಣೆ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ದಸ್ತಗೀರ್ ಅವರು ವಹಿಸಿದ್ದರು. ಕಾಂ. ಸೈಯದ್ ಕರೀಂ ಸ್ವಾಗತಿಸಿದ ನಂತರ ರಾಜ್ಯ ಬೀಡಿ ಫೆಡರೇಷನ್ನಿನ ಕಾಂ. ಕೆ. ಆರ್. ನಾಯಕ್ ಅವರು ಮಾತನಾಡಿದರು. ಸಭೆಯಲ್ಲಿ ಕಾಮ್ರೇಡುಗಳಾದ ಸೈಯದ್ ಅನ್ವರ್, ಅಮಾನುಲ್ಲಾ ಮತ್ತು ಹಾಜರಾಂಬಿ ಅವರೂ ಮಾತನಾಡಿದರು.

ತಿಪಟೂರು

ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಸಿ. ಐ. ಟಿ. ಯು. ನೇತೃತ್ವದಲ್ಲಿ ಮೇ ದಿನ ಆಚರಿಸಲಾಯಿತು. ಬ್ಯಾಂಕ್, ಮತ್ತು ಇತರ ವಿಭಾಗಗಳ ನೌಕರರು ಸಿ. ಐ. ಟಿ. ಯು. ಜೊತೆ ಸೇರಿದ್ದರು. ಮೆರವಣಿಗೆಯ ನಂತರ ಸಭೆ ನಡೆಯಿತು.

ಚಿಕ್ಕಮಗಳೂರು

ನಗರದ ಮೂರು ಕಾಫಿ ಕ್ಯೂರಿಂಗ್ ಕಾರ್ಮಿಕ ನೌಕರರು, ಸಂಯುಕ್ತ ನೌಕರರ ಕ್ರಿಯಾವೇದಿಕೆಯ ಸಂಚಾಲಕರಾದ ಕಾಂ. ಬಿ. ಎಲ್. ಶೋಡಿನಾಯ್ಕ ಅವರ ಅಧ್ಯಕ್ಷತೆಯಲ್ಲಿ ಮೇ ದಿನ ಆಚರಿಸಿದರು. ಮೇ ದಿನದ ಚರಿತ್ರೆಯನ್ನು ಎಲ್. ಐ. ಸಿ. ಯ ಕಾಂ. ನರಸಿಂಹ ಶೆಣೈ ವಿವರಿಸಿದರು. ನಂತರ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಅವರು ಸಿ. ಐ. ಟಿ. ಯು. ಕಾರ್ಮಿಕರಿಗೆ ಕೊಟ್ಟಿರುವ ಮೇ ದಿನದ ಪ್ರಣಾಳಿಕೆಯನ್ನು ವಿವರಿಸಿದರು. ಕಾಂ. ಎ. ಕೆ. ವಿಶ್ವನಾಥ್ ಅವರು ಮಾತನಾಡಿದ ನಂತರ, ಕಾಫಿ ಕ್ಯೂರಿಂಗ್ ಕಾರ್ಮಿಕರ ವೇತನ ಪುನರ್ವಿಮರ್ಶೆ, ಮೋಟಾರ್, ಸಾರಿಗೆ, ಸಾಮಿಲ್ಸ್ ಮತ್ತಿತರ, ಅಸಂಘಟಿತ ಕಾರ್ಮಿಕರ ವೇತನ ಏರಿಕೆ ಬಗ್ಗೆ ಮುಷ್ಕರ ನಡೆಸುವ ನಿರ್ಣಯ ಕೈಗೊಳ್ಳಲಾಯಿತು.

ಹರಿಹರ

ಚಿತ್ರದುರ್ಗ ಜಿಲ್ಲೆಯ ಹರಿಹರದ ಪಕ್ಷದ ಶಾಖೆಯು ಮೇ ದಿನವನ್ನು ಬೃಹತ್ತಾಗಿ ಆಚರಿಸಿತು. ಕಾಂ. ಡಿ. ಜಿ. ಜೋಷಿಯವರು ಮೇ ದಿನದ ಮಹತ್ವ ವಿವರಿಸಿ, ಕಾರ್ಮಿಕರ ಐಕ್ಯ ಹೋರಾಟಕ್ಕೆ ಕರೆಕೊಟ್ಟರು. ಕಾಂ. ಸದಾಶಿವಪ್ಪ, ಕಾಂ. ಸೈಯದ್‌ಸಾಬ, ಕಾಂ. ಅಬ್ದುಲ್ ರಹಮಾನ್, ಕಾಂ. ಸೀತಾಪತಿ ಇವರು ಸಭೆಯನ್ನು ಕುರಿತು ಮಾತನಾಡಿದರು. ಶಿರಸಿಯ ತರುಣ ಮುಂದಾಳು ರಮೇಶ ಚೌಧುರಿ ಮತ್ತು ಕಾಂ. ಎಂ. ಎಸ್. ಧಾರೇಶ್ವರ ಅವರೂ ಸಭೆಯಲ್ಲಿ ಭಾಷಣ ಮಾಡಿದರು. ಕೈಗಾರಿಕಾ ಮಸೂದೆಯ ವಾಪಸಾತಿ, ನಿರುದ್ಯೋಗ ಭತ್ತೆ ಮತ್ತು ಸಂವಿಧಾನದಲ್ಲಿ ಕೆಲಸದ ಹಕ್ಕು ಸೇರ್ಪಡೆ, ಹರಿಜನರ ದಬ್ಬಾಳಿಕೆಯ ಖಂಡನೆ, ಪೌರಕಾರ್ಮಿಕರಿಗೆ ಬೆಂಬಲ ಮುಂತಾದ ವಿಚಾರಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಿರ್ಸಿ:

ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯಲ್ಲಿ ಮೇ ಒಂದರಂದು ಒಂಗಾರೇಶ್ವರ ಕೆರಿಯ ಗೌಡರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆ ನಡೆಯಿತು. ಕಾಂ. ಮಂಜುನಾಥ ಪುಲ್ಕರವರು ಮೇದಿನದ ಮಹತ್ವವನ್ನು ವಿವರಿಸಿದರು. ಅಧ್ಯಕ್ಷರು ರೈತ-ಕಾರ್ಮಿಕರ ಸಂಘಟನೆ ಮಾಡಲು ಕರೆಯಿತ್ತು, ಕಾರ್ಮಿಕರ ಮತ್ತು ರೈತರ ಸರಕಾರವೇ ಬರಲಿ ಎಂದು ಹಾರೈಸಿದರು.

ಕೆ.ಜಿ.ಎಫ್.

ಕೆ. ಜಿ. ಎಫ್. ನಲ್ಲಿ ಮೇ ದಿನಾಚರಣೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯ್ತು. ಚಿನ್ನದಗಣಿ ಕಾರ್ಮಿಕರ ಮನೆ ಮೇಲೆ ಕೆಂಬಾವುಟಗಳು ಹಾರಿದುವು. ಮೈಸೂರು ಮೈನ್ ಪ್ರದೇಶದಲ್ಲಿ ಕಾಂ. ಕಣ್ಣನ್ ರವರು, ಕೆ. ಜಿ. ಎಫ್. ಮುನ್ಸಿಪಲ್ ಪ್ರದೇಶದಲ್ಲಿ ಕಾಂ. ಟಿ. ಎಸ್. ಮಣಿಯವರು, ನಂದಿದುರ್ಗ ಮೈನ್ ಮತ್ತು ಬಿ.ಇ.ಎಮ್.ಎಲ್. ಕಾಲೋನಿಯಲ್ಲಿ ಕಾಂ. ಸವರಿದಾಸ್ ಮತ್ತು ಕಾಂ. ರಾಧಾಕೃಷ್ಣರವರಿಂದ ಧ್ವಜಾರೋಹಣವಾಯಿತು.

ಮೇ ದಿನಾಚರಣೆಯ ಅಂಗವಾಗಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮದ್ರಾಸಿನ ಪಲ್ಲವನ್ ಸಾರಿಗೆ ನೌಕರರ ಒಕ್ಕೂಟದ ಕಾರ್ಯದರ್ಶಿ ಕಾಂ. ಎ. ಸೌಂದರ್ ರಾಜನ್, ಕಾಂ. ಟಿ. ಎಸ್. ಮಣಿ, ಕಾಂ. ರಾಧಾಕೃಷ್ಣನ್, ಕಾಂ. ಪಿ. ಕಣ್ಣನ್ ಮೊದಲಾದವರು ಭಾಷಣ ಮಾಡಿದರು. ಕೆ. ಜಿ. ಎಫ್. ನ ಪಾರ್ಟಿ ಆಫೀಸಿನ ಆವಾರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೂ ನಡೆಯಿತು.

ಗೋಹತ್ಯಾ ನಿಷೇಧ ಮತ್ತು ಆರ್ಥಿಕ ಸಮಸ್ಯೆಗಳು

—ಆರ್. ಚಂದ್ರ

ಪ್ರಮುಖ ರಾಜ್ಯಗಳಲ್ಲಿನ ಜಾನುವಾರುಗಳ ಸಂಖ್ಯೆ

(ಸಾವಿರಗಳಲ್ಲಿ, '000)

ರಾಜ್ಯಗಳು	ದನಗಳು	ಎಮ್ಮೆಗಳು
ಉ. ಪ್ರದೇಶ	26145	12581
ಮಧ್ಯಪ್ರದೇಶ	26392	5789
ಬಿಹಾರ್	14911	3679
ಮಹಾರಾಷ್ಟ್ರ	14697	3269
ಆಂಧ್ರಪ್ರದೇಶ.	12525	7028
ರಾಜಸ್ಥಾನ	12470	4952
ಪ. ಬಂಗಾಳ	12188	.839
ತಮಿಳುನಾಡು	ಮಾಹಿತಿ ದೊರೆಯುವುದಿಲ್ಲ.	
ಒರಿಸ್ಸಾ	11769	1409
ಕರ್ನಾಟಕ	10134	3289
ಗುಜರಾತ್	6536	3600
ಪಂಜಾಬ್	3606	4067
ಕೇರಳ	2835	475

ಆಧಾರ : 1972ರ ಜಾನುವಾರುಗಳ ಗಣನೆಯ ಅಂಕೆ ಸಂಖ್ಯೆಗಳು. ಕೃಷಿಭವನ, ಕೇಂದ್ರ ಸರಕಾರದ ಪ್ರಕಟಣೆ.

ನಮ್ಮ ದೇಶದಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧಕ್ಕಾಗಿ ಬಹು ಕಾಲದಿಂದ ಚಳವಳಿ ನಡೆಯುತ್ತಿದೆ. ಆದರೆ, ದುರದೃಷ್ಟದಿಂದ, ಅಂತಹ ಚಳವಳಿ ಹೆಚ್ಚಾಗಿ ಧಾರ್ಮಿಕ ಅಂಧ ಶ್ರದ್ಧೆಯಿಂದಲೂ, ಪ್ರಾಣಿದಯೆಯ ಭಾವುಕತೆಯಿಂದಲೂ, ಒಂದು ಧರ್ಮದ ನಂಬಿಕೆ ನಡವಳಿಕೆಗಳನ್ನು ಇತರ ಧರ್ಮಾವಲಂಬಿಗಳ ಮೇಲೆ ಒತ್ತಾಯಿಸುವ ಹಠವಾದದಿಂದಲೂ ಪ್ರಭಾವಿತವಾಗಿವೆ.

ಸಂಪೂರ್ಣ ಗೋಹತ್ಯಾ ನಿಷೇಧವನ್ನು ಪ. ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಜಾರಿಗೆ ತರುವಂತೆ ಶಾಸನ ಮಾಡಲು ಒತ್ತಾಯಿಸಿ 84 ವರುಷ ಪ್ರಾಯದ ಆಚಾರ್ಯ ವಿನೋಬಾ ಭಾವೆ ತಾ. 22-4-79 ರಿಂದ ಆಮರಣ ಉಪವಾಸ ಮುಷ್ಕರ ಹೂಡಿರುವುದರಿಂದ, ಪುನಃ ಈ ಸಮಸ್ಯೆಯನ್ನು ಆರ್ಥಿಕ ದೃಷ್ಟಿಯಿಂದ ಪರಿಶೀಲಿಸುವ ಬದಲು ಧರ್ಮಾಂಧತೆಗೂ ಭಾವುಕತೆಗೂ ಹೆಚ್ಚು ಆಸ್ಪದ ನೀಡುವಂತಾಗಿದೆ. ಆಮರಣ ಉಪವಾಸ ಸತ್ಯಾಗ್ರಹ ಹೂಡಿರುವ ವಿನೋಬಾರವರ ಜೀವ ಉಳಿಸುವ ಪ್ರಶ್ನೆಯೇ ಈಗ ಎಲ್ಲರಿಗೂ ಮುಖ್ಯವಾಗುತ್ತಿದೆ. ಆದರೆ, ಈ ಎರಡು ರಾಜ್ಯಗಳಲ್ಲಿ ಅಥವಾ ದೇಶಾದ್ಯಂತ ಗೋಹತ್ಯಾ ನಿಷೇದ ಶಾಸನ ಆರ್ಥಿಕ-ಸಾಮಾಜಿಕ ದೃಷ್ಟಿಯಿಂದ ಅಗತ್ಯವೇ ? ಅಂತಹ ಶಾಸನವನ್ನು ಸಮರ್ಪಕವಾಗಿ ಜಾರಿಗೊಳಿಸಲಾದೀತೇ ? ಈ ಪ್ರಶ್ನೆಗಳಿಗೆ ಉತ್ತರಿಸುವವರು ವಿರಳ.

ಈ ಮಧ್ಯೆ, ವಿನೋಬಾರವರ ಉಪವಾಸ ಮುಷ್ಕರದಿಂದಾಗಿ ಉಂಟಾಗುತ್ತಿರುವ ಪ್ರಕ್ಷುಬ್ಧ ವಾತಾವರಣವನ್ನು ಇಂದಿರಾ ಕಾಂಗ್ರೆಸ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ (RSS), ಮುಂತಾದ ಫ್ಯಾಸಿಸ್ಟ್ ಶಕ್ತಿಗಳೂ, ಮತಾಂಧ ಸಂಘ ಸಂಸ್ಥೆಗಳೂ ರಾಜಕೀಯವಾಗಿ ದುರುಪಯೋಗ ಮಾಡಿಕೊಂಡಿವೆ. ದೇಶದ ಇತರ ರಾಜ್ಯಗಳನ್ನು ಹೋಲಿಸಿ ನೋಡಿದರೆ, ಪ. ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಕೋಮುವಾರು ಗಲಭೆಗಳಿಂದ ಮುಕ್ತರಾಗದೆ, ಈ ರಾಜ್ಯಗಳಲ್ಲಿ ಜನರ ಕ್ರಿಯಾಶಕ್ತಿಗಳನ್ನು ಹೆಚ್ಚಾಗಿ ಆರ್ಥಿಕ ಹಾಗೂ ರಾಜಕೀಯ ಹೋರಾಟಗಳತ್ತ ಹರಿಸಲಾಗಿದೆ. ಈ ಹಿತಕರ ವಾತಾವರಣವನ್ನು ಕದಡಿಸುವ ದುರುದ್ದೇಶವೇನಾದರೂ ವಿನೋಬಾರವರ ಸಧ್ಯದ ಚಳವಳಿಯಲ್ಲಿ ಅಡಗಿದೆಯೇ ? ಕೇಂದ್ರ ಮಂತ್ರಿಗಳೂ, ಸರ್ವಪಕ್ಷಗಳ ಪ್ರತಿನಿಧಿಗಳೂ, ಪ. ಬಂಗಾಳ ಮತ್ತು ಕೇರಳ ರಾಜ್ಯಗಳ ಮುಖ್ಯ ಮಂತ್ರಿಗಳೂ; ಹೆಸರಾಂತ ಅರ್ಥಶಾಸ್ತ್ರಜ್ಞರೂ, ಸಾವಿರಾರು ಸಂಘ ಸಂಸ್ಥೆಗಳೂ, ಪತ್ರಿಕೆಗಳೂ ಒಕ್ಕೊರಲಿನಿಂದ ಉಪವಾಸ ಮುಷ್ಕರವನ್ನು ಕೈಬಿಡಬೇಕೆಂದು ಒತ್ತಾಯಿಸುತ್ತಿದ್ದರೂ, ವಿನೋಬಾರವರು ತಮ್ಮ ಹಠ ಯಾಕೆ ಬಿಡಲಾರರು ? ಕಾಂಗ್ರೆಸ್ ಆಡಳಿತ ಕಾಲದಲ್ಲಿಯೂ, ತುರ್ತುಪರಿಸ್ಥಿತಿಯ ಫ್ಯಾಸಿಸ್ಟ್ ಆಳ್ವಿಕೆಯಲ್ಲಿಯೂ, ಅನಂತರದ ಜನತಾ ಆಡಳಿತದಲ್ಲಿಯೂ ಅಲ್ಪಸಂಖ್ಯಾತರಾದ ಬಡ ಮುಸಲ್ಮಾನರ ಮತ್ತು ಇತರರ ಮೇಲೆ, ಬಡ ಹರಿಜನ ಗಿರಿಜನರ ಮೇಲೆ, ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರ ಮೇಲೆ ಧಾಳಿ ದಬ್ಬಾಳಿಕೆ ಕೊಲೆ ಮುಂತಾದವುಗಳು ಪ್ರತಿದಿನವೂ ಅನಿರ್ಭಂದಿತವಾಗಿ ನಡೆಯುತ್ತಿದ್ದರೂ ವಿನೋಬಾರವರೂ ಅವರ ಬೆಂಬಲಿಗರೂ ಮೌನವಾಗಿದ್ದು ಈಗ ಇದ್ದಕ್ಕಿದ್ದಂತೆ ಸಂಪೂರ್ಣ ಗೋಹತ್ಯಾ ನಿಷೇಧ ಚಳವಳಿಯನ್ನು ಕೈಕೊಂಡುದುದರ ಔಚಿತ್ಯವೇನು ? ಇತರ ರಾಜ್ಯಗಳಲ್ಲಿ ತೋರಿಕೆಗೆ ಗೋಹತ್ಯಾ ನಿಷೇಧದ ಶಾಸನಗಳಿದ್ದರೂ, ಅವುಗಳು ವಾಸ್ತವವಾಗಿ ಜಾರಿಯಲ್ಲಿವೆಯೆಂದು ವಿನೋಬಾರವರು ಪರಿಶೀಲಿಸಿರುವರೋ? ಈ ರಾಜ್ಯಗಳಲ್ಲಿಯೂ ಗೋಮಾಂಸ ಧಾರಳವಾಗಿ ಸಿಗುತ್ತಿದೆ. ದನಕರುಗಳನ್ನು ಗುಟ್ಟಾಗಿ ಕೊಲ್ಲಲಾಗುತ್ತಿದೆ ಮತ್ತು ನೆರೆಯ ರಾಜ್ಯಗಳಿಗೆ ಸಾಗಿಸಿ ಕೊಲ್ಲಲಾಗುತ್ತಿದೆ. ಇದು ಸತ್ಯ ಸಂಗತಿ.

ಪಶುಸಂಪತ್ತು ಮತ್ತು ದಾರಿದ್ರ್ಯ :

ಪಶುಪಾಲನೆಯು ಭಾರತದಲ್ಲಿ ಜನರ ಆರ್ಥಿಕ ಭದ್ರತೆಗೆ ಅನುಕೂಲವಾಗುವಂತೆ ಒಂದು ಲಾಭದಾಯಕವಾದ ಉದ್ಯಮವಾಗಿ ಬೆಳೆದು ಬರಲಿಲ್ಲ. ಬದಲು, ಭಾರತದಲ್ಲಿ ಪಶುಪಾಲನೆಯು ಒಂದು ಸಂಪ್ರದಾಯವಾಗಿ ಬಂದಿದೆ. ದನಕರುಗಳ ಮೇಲೆ ದಯೆ, ಭಕ್ತಿ, ಗೌರವ ಧಾರಾಳವಾಗಿ ತೋರಿಸುವ ಶತಮಾನಗಳ ಸಾಂಪ್ರದಾಯಿಕ ಧಾರ್ಮಿಕ ಪೂಜನೀಯ ಮನೋಭಾವನೆಗಳಿಂದ, ದೇಶದ ಹೈನಸಂಪತ್ತಿನಲ್ಲಾಗಲೀ ಜನರ ಜೀವನ ಮಟ್ಟದಲ್ಲಾಗಲೀ ಯಾವ ಗಣನೀಯ ಸುಧಾರಣೆಗಳೂ ಆಗಲಿಲ್ಲ. 1972 ರಲ್ಲಿ ಭಾರತದ ಪ್ರಮುಖ ರಾಜ್ಯಗಳಲ್ಲಿರುವ ಪಶು ಸಂಪತ್ತಿನ ಅಂಕೆಸಂಖ್ಯೆಗಳನ್ನು ಈ ಸಮೀಕ್ಷೆಯ ಬದಿಯಲ್ಲಿ ತಿಳಿಸಲಾಗಿದೆ. ಇದರಂತೆ, ಉ. ಪ್ರದೇಶ, ಮಧ್ಯಪ್ರದೇಶ, ಬಿಹಾರ್, ಮಹಾರಾಷ್ಟ್ರ, ಆಂಧ್ರಪ್ರದೇಶ, ರಾಜಾಸ್ಥಾನ, ಪ. ಬಂಗಾಳ, ತಮಿಳುನಾಡು, ಒರಿಸ್ಸಾ, ಕರ್ನಾಟಕ, ಗುಜರಾತ್, ಪಂಜಾಬ್ ಮತ್ತು ಕೇರಳ ರಾಜ್ಯಗಳಲ್ಲಿ ಮುಖ್ಯವಾಗಿ ಮೊದಲ ಹತ್ತು ರಾಜ್ಯಗಳಲ್ಲಿ ಪಶು ಸಂಪತ್ತು ಸಮೃದ್ಧವಾಗಿದೆ. ದೇಶದಲ್ಲಿ ಸಧ್ಯ ಒಟ್ಟು 180 ಮಿಲಿಯ ದನಗಳು ಇದ್ದು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ದಾಖಲೆಯಾಗಿದೆ. ಆದರೆ, ಇವುಗಳಿಂದ ಸರಾಸರಿ ವರ್ಷಕ್ಕೆ ಪಡೆಯುವ ಹಾಲು ಕೇವಲ 157 ಕೆ. ಜಿ. ಎಂದು ಅಂದಾಜು ಮಾಡಲಾಗಿದೆ. 180 ಮಿಲಿಯ ದನಗಳಿಂದ ಪಡೆಯುವ ವಾರ್ಷಿಕ ಹಾಲು ಕೇವಲ 9 ಮಿಲಿಯ ಟನ್. ಪ್ರಪಂಚದ ಒಟ್ಟು ದನಗಳಿಂದ ಪಡೆಯುವ ಹಾಲು 367 ಮಿಲಿಯ ಟನ್ನುಗಳಾಗಿದ್ದು, ನಮ್ಮ ದೇಶದ ದನಗಳ ಹಾಲಿನ ಉತ್ಪಾದನೆಯು ತೀರಾ ಗೌಣವಾಗಿದೆ. ದೇಶದ ಒಟ್ಟು ಎಮ್ಮೆಗಳಿಂದ ವರ್ಷಕ್ಕೆ ಪಡೆಯುವ ಹಾಲು 11 ಮಿಲಿಯ ಟನ್ನುಗಳಾಗಿದ್ದು ಪ್ರಪಂಚದ ಒಟ್ಟು ಎಮ್ಮೆಗಳಿಂದ ಉತ್ಪಾದಿತವಾಗುವ 20 ಮಿಲಿಯ ಟನ್ನುಗಳ ಹಾಲಿನ ಅರ್ಧಾಂಶಕ್ಕಿಂತಲೂ ಹೆಚ್ಚಾಗಿರುವುದು. 1970 ರಲ್ಲಿ, FAO ವರದಿ ಇದರಿಂದ ತಿಳಿದುಬರುವುದೇನೆಂದರೆ, ದೇಶದ ಆರ್ಥಿಕ ಜೀವನದಲ್ಲಿ ಅಧಿಕಸಂಖ್ಯೆಯಲ್ಲಿರುವ ಕಡಿಮೆ ಹಾಲು ನೀಡುವ ಬರಡು ದನಗಳಿಗಿಂತ, ಕಡಿಮೆ ಸಂಖ್ಯೆಯಲ್ಲಿರುವ ಹೆಚ್ಚು ಹಾಲು ನೀಡುವ ಎಮ್ಮೆಗಳಿಗೇ ಹೆಚ್ಚು ಮಹತ್ವವಿದೆ. ಆದರೆ, ಸಂಪ್ರದಾಯಸ್ಥರು ದನಕರುಗಳನ್ನು ಕೊಲ್ಲಬಾರದು ಅವುಗಳ ಮಾಂಸ ತಿನ್ನಬಾರದು ಎಂದು ಹೇಳುವರೇ ಹೊರತು ಎಮ್ಮೆಗಳ ಬಗ್ಗೆ ಅವರಿಗೇನೂ ಅನುಕಂಪ ಇಲ್ಲದಿರುವುದು ವಿಚಿತ್ರವಾಗಿದೆ!

ಕೇರಳದ "ಮನೋರಮಾ-1978ರ ವಾರ್ಷಿಕ ಸಂಚಿಕೆ"ಯಲ್ಲಿ ವರದಿಯಾದಂತೆ (P. 477), ಪ. ಜರ್ಮನಿಯ ಕೇಂದ್ರ ಸರಕಾರದ ಹಾಲು ಅನ್ವೇಶಣ ಸಂಸ್ಥೆಯ ಒಂದು ತಜ್ಞ ವರದಿಯಂತೆ, ಆದೇಶದಲ್ಲಿ ಒಂದು ದನವು ವರ್ಷಕ್ಕೆ ಸರಾಸರಿ 4133 ಕೆ.ಜಿ. ಹಾಲು ಕೊಡುವುದು. ಒಳ್ಳೆಯ ಆಹಾರ ಮತ್ತು ಆರೈಕೆ ಪಡೆದ 200 ಸಾಮಾನ್ಯ ದನಗಳ ಕುರಿತಾದ ಒಂದು ಅಧ್ಯಯನದಂತೆ, ಪ. ಜರ್ಮನಿಯಲ್ಲಿ ಒಂದು ದನವು ವರ್ಷಕ್ಕೆ ಸರಾಸರಿ 6000 ಕೆ. ಜಿ. ಹಾಲು ಕೊಡುವುದೆಂದು ತಿಳಿದುಬಂದಿದೆ. ವಿಶೇಷ ತಳಿಯ ಮತ್ತು ಬಹುಮಾನಕ್ಕಾಗಿ ಬಹಳ ಶ್ರಮಪಟ್ಟು ಆರೈಕೆ ಮಾಡಿದ ದನಗಳ ವಾರ್ಷಿಕ ಸರಾಸರಿ ಹಾಲು ಉತ್ಪಾದನೆಯು ಇನ್ನಷ್ಟೂ ಹೆಚ್ಚು ಎನ್ನುವುದು ನಿಃಸಂಶಯ. ನಮ್ಮ ದೇಶದಲ್ಲಿ ವಿಶೇಷ ಆರೈಕೆ ಪಡೆಯುವ ಶ್ರೇಷ್ಟ ತಳಿಯ ದನದ ವಾರ್ಷಿಕ ಸರಾಸರಿ ಹಾಲು ನೀಡಿಕೆಯು ಪ. ಜರ್ಮನಿಯ ಸಾಮಾನ್ಯ ದನದ ವಾರ್ಷಿಕ ಸರಾಸರಿ ಹಾಲಿನಷ್ಟು ಇಲ್ಲ. ದೇಶದ ದನದ ಸರಾಸರಿ ಹಾಲು ಉತ್ಪಾದನೆಯನ್ನು 500 ಕೆ.ಜಿ. ಗೆ ಏರಿಸಿದರೂ, ಅದೊಂದು ಗೌಣವಾದ ದಾಖಲೆಯೇ ಆದೀತು. ಆದರೆ, ದನಒಂದರ ಸರಾಸರಿ ಹಾಲು ಉತ್ಪಾದನೆಯು ವರ್ಷಕ್ಕೆ 500 ಕೆ.ಜಿ. ಗೆ ಏರಿದರೆ, ಸಧ್ಯದ ವಾರ್ಷಿಕ 9 ಮಿಲಿಯ ಟನ್ ಹಾಲು ಉತ್ಪಾದನೆಯನ್ನು ಕೇವಲ 60 ಮಿಲಿಯ ದನಗಳಿಂದ ಪಡೆಯಬಹುದು.

ಅಮೆರಿಕಾ, ಯೂರೋಪು ಮುಂತಾದ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮತ್ತು ರಷ್ಯ ಮುಂತಾದ ಮುಂದುವರಿದ ಸಮಾಜವಾದಿ ರಾಷ್ಟ್ರಗಳಲ್ಲಿ ಪ್ರತಿಯೊಬ್ಬನ ದೈನಂದಿನದ ಹಾಲು ಸೇವನೆಯು 600 ರಿಂದ 700 ಗ್ರಾಂಗಳಷ್ಟಾದರೆ, ನಮ್ಮ ದೇಶದ ಜನರ ಸರಾಸರಿ ಹಾಲು ಸೇವನೆಯು ಕೇವಲ 110 ಗ್ರಾಂ. ಆಗಿರುವುದು. ದೇಶದ ಪೌಷ್ಟಿಕ ಆಹಾರದ ಸಲಹಾ ಸಮಿತಿಯ ಶಿಫಾರಸಿನಂತೆ, ಪ್ರತಿಯೊಬ್ಬನ ದೈನಂದಿನದ ಹಾಲು ಸೇವನೆಯು ಕನಿಷ್ಟ 284 ಗ್ರಾಂ. ಆದರೂ ಇರಬೇಕು. ಸಧ್ಯದ 110 ಗ್ರಾಂ. ಸರಾಸರಿ ಸೇವನೆಯು, ಟಾಟಾ ಬಿರ್ಲಾ ಮುಂತಾದ ಶ್ರೀಮಂತರು ಸೇವಿಸುವ ಹಾಲು ಮತ್ತು ಬಡ ಬೋರ, ಮಾದ, ಕೊರಗ ಮುಂತಾದವರ ಮಕ್ಕಳು ಕೂಡಾ ಸೇವಿಸಲಾರದ ಹಾಲಿನ ಸರಾಸರಿಯಾಗಿದೆ! ದೇಶದ ಬಹು ಭಾಗ ಜನರು ಬಡವರೂ ಕಡು ದರಿದ್ರರೂ ಆಗಿದ್ದು ಅವರಾಗಲೀ ಅವರ ಮಕ್ಕಳಾಗಲೀ ಹಾಲುಣುವುದು ಅಸಾಧ್ಯವಾಗಿದೆ. ಅವರು ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಅನೇಕ ರೋಗರುಜಿನಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬಡರೈತರ, ಭೂಹೀನ ಕೃಷಿಕಾರ್ಮಿಕರ, ನಿರುದ್ಯೋಗಸ್ಥರ ಅಥವಾ ಅರೆ ಉದ್ಯೋಗಸ್ಥರ ಕುಟುಂಬಗಳೇ ಹೆಚ್ಚಾಗಿರುವುದರಿಂದ, ಅವರಿಗೆ ತಮ್ಮ ಬದುಕನ್ನೇ ನಡೆಸಲು ಕಷ್ಟಸಾಧ್ಯವಾಗಿರುವಾಗ, ಬರಡು ದನಗಳನ್ನೂ ಸಾಕಬೇಕೆಂದು ಅವರನ್ನು ಒತ್ತಾಯಿಸುವುದು ಆರ್ಥಿಕವಾಗಿ ನ್ಯಾಯವಾಗಲಾರದು.

ಪಶು ಸಂಗೋಪನೆಯು ಜನರ ಆರ್ಥಿಕ ಸಾಮರ್ಥ್ಯಗಳನ್ನೂ ಜೀವನಾವಶ್ಯಕತೆಗಳನ್ನೂ ಹೊಂದಿಕೊಂಡಿದೆ. ಆ ಕಾರಣದಿಂದ, ಗೋಹತ್ಯಾ ನಿಷೇಧ ಚಳವಳಿಗಿಂತ, ಗ್ರಾಮೀಣ ಬಡಜನರಿಗೆ ಉಳಲು ಭೂಮಿ ಹಂಚುವುದು, ವಾಸಿಸಲು ಮನೆ ಅಡಿ ನೀಡುವುದು ಮತ್ತು ವಸತಿ ಸೌಕರ್ಯ ಒದಗಿಸುವುದು, ವರುಷದ ಹೆಚ್ಚಿನ ದಿನಗಳಲ್ಲಿ ಕೆಲಸ ದೊರೆಯುವಂತೆ ಮಾಡುವುದು, ಜೀವನ ವೆಚ್ಚಕ್ಕನುಗುಣವಾಗಿ ಬಡ ರೈತರ ಫಸಲಿಗೆ ಯೋಗ್ಯ ಬೆಲೆ ನಿಗದಿ ಮಾಡುವುದು, ಅವರ ಕೆಲಸಗಳಿಗೆ ಸೂಕ್ತ ಕನಿಷ್ಟಕೂಲಿಯನ್ನಾದರೂ ಕೊಡುವುದು, ಅವರನ್ನು ಋಣಮುಕ್ತರನ್ನಾಗಿ ಮಾಡಿ ಅವರಿಗೆ ಸಾಲ ಸಹಾಯ ಸಲಹೆಗಳನ್ನು ನೀಡುವುದು, ಇತ್ಯಾದಿ ಕಾರ್ಯಕ್ರಮಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಆದ್ಯತೆ ಪಡೆಯಬೇಕು. ಪಶುಸಂಗೋಪನೆಗೆ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ವೈಜ್ಞಾನಿಕ ವಿಧಾನಗಳನ್ನು ಬಳಸಬೇಕು. ಬಡಕಲು ದನಗಳ ಸಂತತಿಯನ್ನು ಗಣನೀಯವಾಗಿ ಕಡಿಮೆ ಮಾಡಿ, ಒಳ್ಳೆಯ ತಳಿಗಳನ್ನು ಅಭಿವೃದ್ಧಿಗೊಳಿಸಬೇಕು. ಪಶುಸಂಗೋಪನೆಯು ಒಂದು ಲಾಭದಾಯಕವಾದ ಆರ್ಥಿಕ ಭದ್ರತೆಯನ್ನು ನೀಡುವ ಜೀವಸಾಧಾರಕ್ಕೆ ಅಗತ್ಯವಾದ ವಿವಿಧ ಪೌಷ್ಟಿಕಾಹಾರಗಳನ್ನು ಉತ್ಪಾದಿಸುವ ಮತ್ತು ಲಕ್ಷಾಂತರ ಜನರಿಗೆ ಉದ್ಯೋಗ ಸಿಗುವ ಬೃಹತ್ ಉದ್ಯಮವಾಗಬೇಕು. ಆದರೆ, ನಮ್ಮ ದೇಶದಲ್ಲಿ ಸಂಪ್ರದಾಯದ ಕಟ್ಟುಪಾಡುಗಳಿಗೊಳಗಾಗಿ, ಬಡಕಲು ದನಗಳ ಸಂತತಿ ನಿಯಂತ್ರಣಕ್ಕಾಗಿ ಶಸ್ತ್ರ ಚಿಕಿತ್ಸೆ (Sterilisation)ಯನ್ನೂ ವಿರೋಧಿಸಲಾಗುತ್ತಿದೆ. ಹಾಲು ಕೊಡದ ಮುದಿ ಬಡಕಲು ರೋಗಗ್ರಸ್ತ ದನಗಳನ್ನು ನೋವಿಲ್ಲದೆ ವೈಜ್ಞಾನಿಕ ವಿಧಾನಗಳಿಂದ ಕೊಂದು ಮಾಂಸಾಹಾರಕ್ಕಾಗಿ ಬಳಸುವುದನ್ನೂ ವಿರೋಧಿಸಲಾಗುತ್ತಿದೆ. ದನಗಳನ್ನು ಸಾಕಲು ಆರ್ಥಿಕ ಸಾಮರ್ಥ್ಯ ಇಲ್ಲದಿದ್ದರೂ ಅವುಗಳನ್ನು ಕೊಲ್ಲಬಾರದೆಂದು ಒತ್ತಾಯಿಸುವ ಸಂಪ್ರದಾಯಸ್ಥರು ಅಪ್ರತ್ಯಕ್ಷವಾಗಿ ಅವುಗಳ ಜೀವಂತ ನರಳಾಟಕ್ಕೆ ಹೊಣೆಗಾರರಾಗುವರು! ಜನರ ಬಡತನ ದಾರಿದ್ರ್ಯಗಳೊಂದಿಗೆ ಬಡಕಲು ದನಗಳು ಅವರಿಗೆ ಸಹಿಸಲಾರದ ಹೊರೆಯೇ ಆಗುವುವು.

ಸಂವಿಧಾನ ಮತ್ತು ಪಶುಸಂಗೋಪನೆ :

ಭಾರತದ ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳಲ್ಲಿ ದನಕರುಗಳನ್ನು ಮತ್ತು ಇತರ ಹಾಲುಕೊಡುವ ಪ್ರಾಣಿಗಳನ್ನು ಕೊಲ್ಲಕೂಡದು ಎಂದಿದೆ ಎಂದು ಗೋಹತ್ಯಾ ನಿಷೇಧ ಚಳವಳಿಗಾರರ ಒಂದು ವಾದ. ಆದರೆ, ಆದೇ ಸಂಬಂಧಪಟ್ಟ ನಿರ್ದೇಶನ ತತ್ವದಲ್ಲಿ

ಕೃಷಿ ಮತ್ತು ಪಶುಸಂಗೋಪನೆಯನ್ನು ರಾಜ್ಯವು ಆಧುನಿಕ ಹಾಗೂ ವೈಜ್ಞಾನಿಕ ಮಾರ್ಗಗಳಲ್ಲಿ ಅಭಿವೃದ್ಧಿಗೊಳಿಸಲು ಪ್ರಯತ್ನಿಸಬೇಕೆಂದೂ, ಪಶುಗಳ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಳಿಗಾಗಿ ಎಲ್ಲಾ ಸೂಕ್ತಕ್ರಮ ಕೈಕೊಳ್ಳಬೇಕೆಂದೂ ಹೇಳಲಾಗಿದೆ. ಗೋಹತ್ಯಾ ನಿಷೇಧ ಚಳವಳಿಗಾರರು ಈ ವಿಷಯಗಳ ಕುರಿತು ಮೌನವಾಗಿರುವರು. ಅಲ್ಲದೆ, ರಾಜ್ಯ ನಿರ್ದೇಶನ ತತ್ವವು (Art. 47) ರಾಜ್ಯವು ಜನರ ಪೌಷ್ಟಿಕ ಆಹಾರ ಮತ್ತು ಜೀವನ ಮಟ್ಟವನ್ನು ಹೆಚ್ಚಿಸಬೇಕೆಂದೂ ಸಾರ್ವಜನಿಕ ಆರೋಗ್ಯವನ್ನು ಸುಧಾರಿಸಬೇಕೆಂದೂ ತಿಳಿಸುತ್ತದೆ. ಈ ಮೊದಲೇ ತಿಳಿಸಿದಂತೆ, ದೇಶದ ಜನರ ಸರಾಸರಿ ಹಾಲು ಸೇವನೆಯು ದಿನಕ್ಕೆ ಕೇವಲ 110 ಗ್ರಾಂ. ದೇಶದ ಜನರಲ್ಲಿ ಬಹು ಭಾಗ ಮುಸ್ಲಿಮರು, ಕ್ರೈಸ್ತರು, ಹಿಂದುಗಳಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಜನಾಂಗಗಳ ಜನರು ಮತ್ತು ಇತರರು ಮಾಂಸಾಹಾರಿಗಳಷ್ಟೇ ಅಲ್ಲದೆ, ಗೋಮಾಂಸವನ್ನೂ ತಿನ್ನುತ್ತಾರೆ. ಅವರ ಆರೋಗ್ಯಕ್ಕೆ, ಪೌಷ್ಟಿಕ ಆಹಾರಕ್ಕೆ ಅಗ್ಗವಾಗಿ ಸಿಗಬಹುದಾದ ಮಾಂಸ ಎಂದರೆ ಗೋಮಾಂಸ ಒಂದೇ. ಗೋಮಾಂಸದಲ್ಲಿ ಪ್ರೊಟೀನು ಧಾರಾಳವಾಗಿ ಸಿಗುತ್ತದೆ. ನಮ್ಮ ದೇಶದ ಜನರ ಆಹಾರದಲ್ಲಿ ಪ್ರೊಟೀನು ಸೇವನೆಯು ದಿನಕ್ಕೆ 48ಗಾಂ. ಅಷ್ಟೆ. ಅಭಿವೃದ್ಧಿ ಹೊಂದಿದ ದೇಶಗಳ ಜನರ ಸರಾಸರಿ ಪ್ರೊಟೀನ್ ಸೇವನೆಯು ದಿನಕ್ಕೆ 100 ಗ್ರಾಂ. ಗಳಿಗಿಂತಲೂ ಹೆಚ್ಚಾಗಿದೆ. ಪ. ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಎಮ್ಮೆಗಳ ಸಂಖ್ಯೆ ಅತ್ಯಂತ ಕಡಿಮೆಯಾಗಿದ್ದು, ದನಕರುಗಳ ಸಂಖ್ಯೆ ಅನುಕ್ರಮವಾಗಿ ಆ ರಾಜ್ಯಗಳ ಎಮ್ಮೆಗಳ ಸಂಖ್ಯೆಯ ಸುಮಾರು 15 ಪಾಲು ಮತ್ತು 7 ಪಾಲು ಇರುವುದರಿಂದ, ಮಾಂಸಾಹಾರಿಗಳು ದಿನಬಳಕೆಗೆ ಅನಿವಾರ್ಯವಾಗಿ ಗೋಮಾಂಸವನ್ನು ಹೆಚ್ಚಾಗಿ ಬಳಸಬೇಕಾಗುವುದು.

ನಮ್ಮ ದೇಶವನ್ನು ಸಂವಿಧಾನದಲ್ಲಿ ಜಾತ್ಯಾತೀತರಾಷ್ಟ್ರವೆಂದು ಸಾರಿರುತ್ತಾ ಕೆಲವು ಮೇಲ್ಜಾತಿಯ ಜನರ ಧಾರ್ಮಿಕ ಸಾಂಪ್ರದಾಯಿಕ ನಂಬಿಕೆಗಳಿಂದಾಗಿ, ಶಾಸನ ಮೂಲಕ ಮತ್ತಿತರ ಅಸಂಖ್ಯಾತ ಜನರ ಆಹಾರ ಪದ್ಧತಿಯನ್ನು ಬದಲಿಸುವುದು ನ್ಯಾಯವಾಗಲಾರದು. ಈ ವಿಷಯವನ್ನು ಕೇರಳ ಮತ್ತು ಪ. ಬಂಗಾಳದ ಮುಖ್ಯ ಮಂತ್ರಿಗಳಾದ ವಾಸುದೇವನ್ ನಾಯರ್ ಮತ್ತು ಜ್ಯೋತಿಬಸು ಪದೇಪದೇ ಸ್ಪಷ್ಟಪಡಿಸುತ್ತಿದ್ದಾರೆ. ಪ. ಬಂಗಾಳದ ಮಾಜಿ ಮುಖ್ಯ ಮಂತ್ರಿಗಳೆಲ್ಲರೂ ಆ ರಾಜ್ಯದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಕಾರಣಗಳಿಂದ ಸಂಪೂರ್ಣ ಗೋಹತ್ಯೆ ನಿಷೇಧಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರಕಾರಕ್ಕೆ ಲಿಖಿತ ಮೂಲಕ ತಿಳಿಸಿದ ದಾಖಲೆಗಳಿವೆ. ಸಂವಿಧಾನದ ನಿರ್ದೇಶನ ತತ್ವಗಳಿಗನುಗುಣವಾಗಿ ಈ ರಾಜ್ಯಗಳಲ್ಲಿಯೂ ಹಾಲು ಕೊಡುವ ಎಳೆಯ-ಕೇರಳದಲ್ಲಿ 10 ವರ್ಷದ ಕೆಳಗಿನ ಮತ್ತು ಪ. ಬಂಗಾಳದಲ್ಲಿ 14 ವರುಷದ ಕೆಳಗಿನ ದನಗಳನ್ನು ಕೊಲ್ಲಕೂಡದೆಂದು ಈಗಾಗಲೇ ಶಾಸನವಿದೆ. ಅದನ್ನು ಕಟ್ಟುನಿಟ್ಟಾಗಿ ಅನುಸರಿಸುವುದಾಗಿ ಭರವಸೆಯನ್ನು ಇಬ್ಬರು ಮುಖ್ಯ ಮಂತ್ರಿಗಳೂ ಕೊಟ್ಟಿದ್ದಾರೆ. ಇವಾವ ಸಕಾರಣಗಳಿಗೂ ಗೋಹತ್ಯಾ ನಿಷೇಧ ಚಳವಳಿಗಾರರು ಮಣಿಯುವುದಿಲ್ಲ!

ಗೋಸಂರಕ್ಷಣೆಯಲ್ಲದೆ, ಸಂವಿಧಾನದಲ್ಲಿ ಇನ್ನೂ ಅನೇಕ ರಾಜ್ಯ ನಿರ್ದೇಶನ ತತ್ವಗಳನ್ನು ಉಲ್ಲೇಖಿಸಲಾಗಿದೆ. ರಾಜ್ಯವು ರಾಷ್ಟ್ರೀಯ ಜೀವನದಲ್ಲಿ ಎಲ್ಲಾ ಸಂಸ್ಥೆಗಳಲ್ಲೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರಕುವಂತಹ ಜನರ ಕಲ್ಯಾಣ ಸಾಧನೆಯಾಗುವ ಸಾಮಾಜಿಕ ವ್ಯವಸ್ಥೆಯನ್ನುಂಟುಮಾಡಬೇಕು. ರಾಜ್ಯದ ಧೋರಣೆಯು; ನಾಗರಿಕರಿಗೆ-ಗಂಡಸರಿಗೂ ಹೆಂಗಸರಿಗೂ-ಜೀವನಾಧಾರಕ್ಕೆ ಸಾಕಷ್ಟು ಅವಕಾಶ ಪಡೆಯಲು ಹಕ್ಕು ಇರುವಂತಿರಬೇಕು; ಸಮಾಜದ ಭೌತಿಕ ಸಂಪತ್ತುಗಳ ಸ್ವಾಧೀನತೆ ಮತ್ತು ನಿಯಂತ್ರಣವು ಸಮಸ್ತ ಜನರ ಹಿತಕ್ಕಾಗಿರುವಂತೆ ವಿತರಣೆಗೊಳ್ಳುವಂತಿರಬೇಕು; ಆರ್ಥಿಕ ವ್ಯವಸ್ಥೆಯು ಸಮಸ್ತ ಜನರ ಹಿತಾಸಕ್ತಿಗಳಿಗೆ ವಿರೋಧವಾಗಿ ಸಂಪತ್ತು ಮತ್ತು ಉತ್ಪಾದನಾ ಮಾಧ್ಯಮಗಳ ಕೇಂದ್ರೀಕರಣವಾಗದಂತಿರಬೇಕು; ಗಂಡಸರಿಗೂ ಹೆಂಗಸರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ಸಿಗುವಂತಿರಬೇಕು; ಆರ್ಥಿಕ ಅಗತ್ಯತೆಯಿಂದಾಗಿ ನಾಗರಿಕರು ಅವರ ಪ್ರಾಯ ಅಥವಾ ಶಕ್ತಿಸಾಮರ್ಥ್ಯಕ್ಕೆ ಅನುಗುಣವಲ್ಲದೆ ಉದ್ಯೋಗ ವಹಿಸಿಕೊಳ್ಳಬಾರದಂತಿರಬೇಕು; ಕೆಲಸಗಾರರ-ಗಂಡಸರ, ಹೆಂಗಸರ ಮತ್ತು ಎಳೆಯ ಮಕ್ಕಳ-ಆರೋಗ್ಯ ಮತ್ತು ಶಕ್ತಿಸಾಮರ್ಥ್ಯಗಳನ್ನು ದುರುಪಯೋಗ ಮಾಡದಂತಿರಬೇಕು; ಮತ್ತು ಮಕ್ಕಳನ್ನು ಮತ್ತು ಯುವಕರನ್ನು ಶೋಷಣೆಯಿಂದ ಮತ್ತು ನೈತಿಕ ಹಾಗೂ ಭೌತಿಕ ಅಧಃಪತನದಿಂದ ರಕ್ಷಿಸುವಂತಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತುಗಳನ್ನು ಸಂಘಟಿಸಬೇಕು. ಕೆಲಸದ ಹಕ್ಕು, ಶಿಕ್ಷಣದ ಹಕ್ಕು ಮತ್ತು ನಿರುದ್ಯೋಗ, ವೃದ್ಧಾಪ್ಯ, ಅನಾರೋಗ್ಯ, ಅಂಗಹೀನತೆ ಮುಂತಾದ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕ ಸಹಾಯಪಡೆಯುವ ಹಕ್ಕು ಇರಬೇಕು. ಕೆಲಸಗಾರರಿಗೆ ನ್ಯಾಯಯುತ ಹಾಗೂ ಮಾನವೀಯ ಕೆಲಸದ ಪರಿಸರವನ್ನು ಒದಗಿಸಿ ಕೊಡಬೇಕು. ಮಹಿಳಾ ಉದ್ಯೋಗಿಗಳಿಗೆ ಹೆರಿಗೆ ಭತ್ತೆ, ರಜೆ ಸಿಗಬೇಕು. ರಾಜ್ಯವು ಸೂಕ್ತ ಶಾಸನ ಅಥವಾ ಆರ್ಥಿಕ ಸಂಘಟನೆಯಿಂದ ಅಥವಾ ಮತ್ತಿತರ ವಿಧಾನದಿಂದ ಎಲ್ಲಾ ಕೆಲಸಗಾರರಿಗೂ-ಕೃಷಿ, ಕೈಗಾರಿಕೆ ಮತ್ತಿತರ ಕೆಲಸಗಾರರಿಗೂ-ಉದ್ಯೋಗ, ಜೀವನಾದರ್ಶ ವೇತನ ಪಡೆಯಲು ಮತ್ತು ಯೋಗ್ಯ ಜೀವನ ಮಟ್ಟವನ್ನು ಪಡೆಯಲು, ವಿರಾಮವನ್ನು ಸಂಪೂರ್ಣವಾಗಿ ಅನುಭವಿಸಲು ಮತ್ತು ಸಾಂಸ್ಕೃತಿಕ ಮತ್ತು ಸಾಮಾಜಿಕ ಅವಕಾಶಗಳನ್ನು ಪಡೆಯಲು ಪರಿಸರವನ್ನುಂಟುಮಾಡಬೇಕು.

ರಾಜ್ಯವು ಹತ್ತು ವರುಷಗಳಲ್ಲಿ (1950 ರಿಂದ) 14 ವರುಷ ಪ್ರಾಯದ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಮತ್ತು ಧರ್ಮಾರ್ಥವಾಗಿ ಶಿಕ್ಷಣ ನೀಡಬೇಕು. ಅಲ್ಲದೆ, ಪರಿಶಿಷ್ಟಜಾತಿಗಳ ಮತ್ತು ಪರಿಶಿಷ್ಟ ಜನಾಂಗಗಳ ಮತ್ತಿತರ ನಿರ್ಬಲ ವರ್ಗಗಳ ಜನರ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷವಾಗಿ ಅಭಿವೃದ್ಧಿಗೊಳಿಸಬೇಕು. (Art. 38 to 43 & 45 to 46)

ಮುವತ್ತು ವರುಷಗಳಿಂದ ಕಾಂಗ್ರೆಸ್ ಮತ್ತು ಜನತಾ ಆಡಳಿತದಲ್ಲಿ ನಡೆದು ಬಂದಿರುವ ಬಂಡವಾಳಶಾಹಿ ಭೂಮಾಲಕ ಪದ್ಧತಿಯಿಂದ ಇವಾವ ಧ್ಯೇಯೋದ್ದೇಶಗಳೂ ತೃಪ್ತಿಕರವಾಗಿ ನೆರವೇರದಿದ್ದಾಗ, ವಿನೋಬಾರವರು ತಮ್ಮ ಭೂದಾನ ಚಳವಳಿಯನ್ನು ಬಹಳ ವರುಷಗಳ ಹಿಂದೆಯೇ ಬಿಟ್ಟುಬಿಟ್ಟಿದ್ದರೂ, ಈಗ ಗೋಹತ್ಯಾ ನಿಶೇಧ ಚಳವಳಿಯನ್ನು ಎಬ್ಬಿಸಿದುದೇಕೆ? ಗೋಹತ್ಯಾ ನಿಷೇಧ, ಪಾನನಿಷೇಧ, ಇತ್ಯಾದಿ ಚಳವಳಿಗಳು ಜನರ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳನ್ನು ಪರಿಶೀಲಿಸದೆ, ಅವುಗಳ ಪ್ರಗತಿಗಾಗಿ ಮೂಲಭೂತವಾದ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಕೊಳ್ಳದೆ, ಪ್ರಜಾಸತ್ತಾತ್ಮಕವಾದ ಆರ್ಥಿಕ ಹಾಗೂ ರಾಜಕೀಯ ಹೋರಾಟಗಳಿಂದ ಜನರನ್ನು ಆದಷ್ಟು ದೂರಪಡಿಸಲು ಬಯಸುವ ಪಿತೂರಿಗಳಾಗಿವೆ, ಅಷ್ಟೆ.

ಪಶುಸಂಗೋಪನೆಯ ಸಮಸ್ಯೆಗಳು ಜನರ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವಿಷಯಗಳಿಗೆ ನಿಕಟವಾಗಿ ಸಂಬಂಧಿಸಿರುವುದರಿಂದಲೇ, ಸಂವಿಧಾನದಲ್ಲಿ ಈ ವಿಷಯವು "ರಾಜ್ಯಯಾದಿ"ಯಲ್ಲಿಯೇ ಸೇರಿಸಲ್ಪಟ್ಟಿದೆ. ವಿನೋಬಾ ಮತ್ತು ಅವರ ಬೆಂಬಲಿಗರ ಒತ್ತಾಯಕ್ಕೆ ಮಣಿದು, ಈ ವಿಷಯವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡರ ವ್ಯಾಪ್ತಿಗೊಳಗಾಗುವಂತೆ "ಜಂಟಿಯಾದಿ"ಯಲ್ಲಿ ಸೇರಿಸುವ ವಿಚಾರ ಕೇಂದ್ರ ಜನತಾ ಸರಕಾರ ಪರಿಶೀಲಿಸುತ್ತಿದೆ. ತುರ್ತು ಪರಿಸ್ಥಿತಿಯಲ್ಲಿ ಶಿಕ್ಷಣವಿಷಯವನ್ನು "ರಾಜ್ಯಯಾದಿ"ಯಿಂದ ತೆಗೆದು "ಜಂಟಿಯಾದಿ"ಗೆ ಸೇರಿಸಿ ರಾಜ್ಯ ಸ್ವಾಯತ್ತತೆಯನ್ನು ಈಗಾಗಲೇ ಮೊಟಕುಗೊಳಿಸಲಾಗಿದೆ. ಆರ್ಥಿಕ ರಾಜಕೀಯ ಅಧಿಕಾರಗಳು ಕೇಂದ್ರ ಸರಕಾರದಲ್ಲಿಯೇ ಕೇಂದ್ರೀಕೃತವಾಗಿರಬಾರದೆಂದು ರಾಜ್ಯ ಸರಕಾರಗಳು ಒತ್ತಾಯಿಸುತ್ತಿರುವಾಗ, ಪಶುಸಂಗೋಪನೆಯ ವಿಷಯವನ್ನೂ "ಜಂಟಿಯಾದಿ"ಗೆ ಸೇರಿಸಿ ಪ. ಬಂಗಾಳ ಮತ್ತು ಕೇರಳ ರಾಜ್ಯಗಳನ್ನು ಸೇರಿಸಿ ದೇಶದಾದ್ಯಂತ ಗೋಹತ್ಯಾ ನಿಷೇಧದ ಕೇಂದ್ರ ಶಾಸನವನ್ನು ಮಾಡಿದರೆ, ಕೇಂದ್ರ-ರಾಜ್ಯ ಸರಕಾರಗಳೊಳಗಿನ ಬಿಕ್ಕಟ್ಟು ಇನ್ನಷ್ಟೂ ಹೆಚ್ಚಾದೀತು. ಈ ಸಮೀಕ್ಷೆಯನ್ನು ಬರೆದು ಮುಗಿಸುತ್ತಲೇ, ಪ್ರಧಾನಿ ಮುರಾರ್ಜಿದೇಸಾಯಿ ಅವರು ಪಶುಸಂಗೋಪನೆಯನ್ನು "ಜಂಟಿಯಾದಿ"ಯಲ್ಲಿ ಸೇರಿಸುವ ಸಂವಿಧಾನ ತಿದ್ದುಪಡಿಯನ್ನು ಮಾಡಿ, ಒಂದು ವರುಷದೊಳಗೇ ದೇಶಾದ್ಯಂತ ಸಂಪೂರ್ಣ ಗೋಹತ್ಯಾ ನಿಷೇಧದ ಶಾಸನವನ್ನು ಜಾರಿಗೆ ತರುವುದಾಗಿ ಭರವಸೆ ಕೊಟ್ಟುದರಿಂದ, ವಿನೋಬಾ ಭಾವೆ ಉಪವಾಸ ಮುಕ್ತಾಯ ಮಾಡಿದ್ದಾರೆ. ಪ್ರಧಾನಿಯ ಈ ಕ್ರಮವು ಪ್ರಜಾಸತ್ತಾತ್ಮಕ ಶಕ್ತಿಗಳಿಗೊಂದು ಸವಾಲಾಗಿದೆ.

ಕೇರಳ ಪತ್ರ

ಕೇರಳದ ಉಪಚುನಾವಣೆ

ಬಿಸಿಯೇರುತ್ತಿರುವ ಚುನಾವಣಾರಂಗ

(ನಮ್ಮ ವರದಿಗಾರರಿಂದ)

ಕೇರಳದ ನಾಲ್ಕು ಎಸೆಂಬ್ಲಿ ಕ್ಷೇತ್ರಗಳಲ್ಲಿ ಇದೇ ತಿಂಗಳ ಮೇ 17 ರಂದು ನಡೆಯಲಿರುವ ಉಪಚುನಾವಣೆಯು ಕೇರಳ ರಾಜಕೀಯದಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಮಾರ್ಕ್ಸ್‌ವಾದೀ ಪಕ್ಷದ ನಾಯಕತ್ವದಲ್ಲಿರುವ ಪ್ರತಿಪಕ್ಷ ಐಕೀಕರಣ ಸಮಿತಿಯು ಈ ನಾಲ್ಕು ಕಡೆಗಳಲ್ಲಿಯೂ ಉಮೇದ್ವಾರರನ್ನು ನಿಲ್ಲಿಸಿ ಸ್ಪರ್ಧಿಸುತ್ತಿದೆ. 'ಪಾರಶ್ಯಾಲಿ' ಮತ್ತು ತಲಚ್ಚೇರಿಯಲ್ಲಿ ಮಾರ್ಕ್ಸ್‌ವಾದೀ ಪಕ್ಷದ ಉಮೇದ್ವಾರರೂ, 'ಕಾಸರಗೋಡಿ'ನಲ್ಲಿ ಬಂಡುಗಾರ ಮುಸ್ಲಿಂಲೀಗಿನ ಪರವಾಗಿಯೂ 'ತಿರುವಲ್ಲ'ದಲ್ಲಿ ಜನತಾ ಪಕ್ಷದ ಪರವಾಗಿಯೂ ಉಮೇದ್ವಾರರನ್ನು ನಿಲ್ಲಿಸಿ ಸ್ಪರ್ಧಿಸುತ್ತಿದೆ.

ತಲಚ್ಚೇರಿಯನ್ನುಳಿದು ಇತರ ಮೂರು ಕ್ಷೇತ್ರಗಳೂ ಆಳುವ ರಂಗವು ಗೆದ್ದ ಸ್ಥಳವಾಗಿದೆ. ಆದರೆ ಇಂದು ಚುನಾವಣಾ ಗಾಳಿಯು ಎಲ್ಲೆಡೆಗಳಲ್ಲಿಯೂ ಆಳುವ ರಂಗಕ್ಕೆ ವಿರುದ್ಧವಾಗಿ ಬೀಸುವುದರಿಂದಾಗಿ ಕಂಗೆಟ್ಟ ಬಲಕಮ್ಯುನಿಸ್ಟ್ ಮುಖ್ಯ ಮಂತ್ರಿ ವಾಸುದೇವನ್ ನಾಯರ್ ನಾಯಕತ್ವದಲ್ಲಿರುವ ಆಡಳಿತ ಕೂಟವು ವ್ಯಾಪಕವಾಗಿ ಆಡಳಿತ ಯಂತ್ರದ ದುರುಪಯೋಗ ನಡೆಸಿ ಮತಗಳನ್ನು ಹಿಡಿಯಲು ಶ್ರಮಿಸುತ್ತಿದೆ. ಆರ್. ಎಸ್. ಎಸ್. ಆಯುಧ ತರಬೇತಿಯನ್ನು ತಡೆಗಟ್ಟಲು ಸುಗ್ರೀವಾಜ್ಞೆ ತಂದೆವೆಂದು ಜಂಬ ಕೊಚ್ಚುವ ಬಲಕಮ್ಯುನಿಸ್ಟರು ತಲಚ್ಚೇರಿಯಲ್ಲಿನ ಆರ್. ಎಸ್. ಎಸ್. ಮತಗಳನ್ನು (ಬಹಳ ಅಲ್ಪ ಸಂಖ್ಯಾತರಾಗಿದ್ದರೂ) ಪಡೆಯಲು ಶ್ರಮಿಸುತ್ತಿದ್ದಾರೆ. ಈಗಾಗಲೇ ಆರ್. ಎಸ್. ಎಸ್. ಮುಖಂಡರೊಡನೆ ಮಾತುಕತೆ ನಡೆಸಿ ತಲಚ್ಚೇರಿಯಲ್ಲಿ ಮಾರ್ಕ್ಸ್‌ವಾದೀ ಪಕ್ಷದ ಕಾರ್ಯಕರ್ತರನ್ನು ಕೊಲೆಗೈದ ಕೊಲೆಗಡುಕರಿಗೆ ರಕ್ಷಣೆ ಕೊಡುವಂತೆ ಬಲಕಮ್ಯುನಿಸ್ಟ್ ನಾಯಕರು ಭರವಸೆ ಇತ್ತಿದ್ದಾರೆಂದು ತಿಳಿದು ಬಂದಿದೆ. ಮಾತ್ರವಲ್ಲ ಗಲಭೆಗಳನ್ನು ಸೃಷ್ಟಿಸುವುದರಲ್ಲಿ ಕುಪ್ರಸಿದ್ಧರಾದ ಪ್ರಾಂತ್ಯದ ಕೆಲವು ಪ್ರಮುಖ ಗೂಢಚಾರ ಪೋಲೀಸ್ ಅಧಿಕಾರಿಗಳನ್ನು ಆಳುವ ರಂಗದ ಪರವಾಗಿ ಕೆಲಸ ಮಾಡಲು ಕಳುಹಿಸಿದ್ದಾರೆ. 'ತಿರುವಲ್ಲ'ದಲ್ಲಿ ಕ್ಯಾಂಪ್ ಹಾಕಿರುವ ಕೇರಳದ ಗೃಹಮಂತ್ರಿಯೊಡನೆ ದೂರವಾಣಿಯ ಮುಖಾಂತರ ಬಲಕಮ್ಯುನಿಸ್ಟ್ ನಾಯಕರು ಮಾತುಕತೆ ನಡೆಸಿ ಈ ವ್ಯವಸ್ಥೆ ಮಾಡಿರುವ ಸುದ್ದಿಯಿದೆ. ಆರ್. ಎಸ್. ಎಸ್. ನ್ನು ಉಪಯೋಗಿಸಿ ಮಾರ್ಕ್ಸ್‌ವಾದೀ ಪಕ್ಷದ ಕಾರ್ಯಕರ್ತರ ಮೇಲೆ ಆಕ್ರಮಣ ಸಂಘಟಿಸಿ ಅದನ್ನು ಜನತಾ-ಮಾರ್ಕ್ಸಿಸ್ಟ್ ಗಲಭೆಯಾಗಿ ಚಿತ್ರೀಕರಿಸಿ ಪ್ರಚಾರ ನಡೆಸುವ ಕಾರ್ಯಕ್ರಮದಿಂದೊಡಗೂಡಿಯಾಗಿದೆ ಇವರು ತಲಚ್ಚೇರಿಗೆ ಹೊರಟಿರುವುದು. ಚುನಾವಣೆಯಲ್ಲಿ ಗೆದ್ದು ಅಧಿಕಾರವನ್ನು ಭದ್ರಪಡಿಸಲು ಯಾವ ಭ್ರಷ್ಟಾಚಾರವನ್ನೂ, ಯಾವ ಕೃತ್ಯವನ್ನೂ ಎಸಗಲೂ, ಎಲ್ಲಾ ರೀತಿಯ ಮಾನವೀಯ ಮತ್ತು ರಾಜಕೀಯ ಮೌಲ್ಯಗಳನ್ನು ಧಿಕ್ಕರಿಸುವ ಒಂದು ಆಳುವ ಕೂಟವಾಗಿದೆ ಇಂದು ಕೇರಳದಲ್ಲಿರುವುದು. ಆಳುವ ರಂಗವು ಚುನಾವಣೆಗೆ ಹಣವನ್ನು ನೀರಿನಂತೆ ಚೆಲ್ಲುತ್ತಿದ್ದರೂ ಗೆಲ್ಲುವೆವೆಂಬ ಧೈರ್ಯ ಮುಖ್ಯಮಂತ್ರಿಗೂ ಕೂಡ ಇಲ್ಲವೆಂಬುದು ಈಗಾಗಲೇ ವ್ಯಕ್ತವಾಗಿದೆ.

ಈ ಚುನಾವಣೆಯು ಆಳುವ ರಂಗಕ್ಕೆ ಪ್ರಬಲವಾದ ಪ್ರಹರವನ್ನು ಕೊಡುವುದರಲ್ಲಿ ಸಂಶಯವಿಲ್ಲ. ಜನಬೆಂಬಲವು ಎಂದೋ ಶಮಗೆ ನಷ್ಟವಾಗಿದೆ ಎಂಬುದನ್ನು ಖಚಿತಪಡಿಸಿದುದರಿಂದಾಗಿಯೇ ಕೇರಳದ ಪಂಚಾಯತ್ ಚುನಾವಣೆಯನ್ನು ಇಪ್ಪತ್ತೊಂದನೇ (21) ಬಾರಿಗೂ ಕೂಡಾ ಮುಂದೂಡಿರುವುದಾಗಿದೆ.

ಕಾಂಗ್ರೆಸ್(ಐ)ಯವರೇ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಆದರೆ ಪ್ರಧಾನ ಸ್ಪರ್ಧೆಯು ಆಳುವ ರಂಗಕ್ಕೂ ಪ್ರತಿಪಕ್ಷ ಐಕೀಕರಣ ಸಮಿತಿಗೂ ಪರಸ್ಪರವಾಗಿದೆ. ತಲಚ್ಚೇರಿಯಲ್ಲಿ ಮಾತ್ರ ಸ್ವತಂತ್ರ ಉಮೇದ್ವಾರನ ವೇಷಹಾಕಿ ಕಾಂಗ್ರೆಸ್ (ಐ) ಸ್ಪರ್ಧಿಸುತ್ತದೆ.

ಈ ನಾಲ್ಕು ಕಡೆಗಳಲ್ಲಿಯೂ ಚುನಾವಣಾ ಪ್ರಚಾರಕ್ಕಾಗಿ ಮಾರ್ಕ್ಸ್‌ವಾದೀ ಪಕ್ಷದ ಕಾರ್ಯಕರ್ತರು ರಾತ್ರಿ ಹಗಲೆನ್ನದೆ ಶ್ರಮಿಸುತ್ತಿದ್ದಾರೆ. ಮಾ. ಪಕ್ಷದ ನಾಯಕತ್ವದಲ್ಲಿರುವ ರೈತಸಂಘ, ವಿವಿಧ ಕಾರ್ಮಿಕ ಸಂಘಟನೆಗಳು, ಮಹಿಳಾ ಮತ್ತು ವಿದ್ಯಾರ್ಥಿ ಸಂಘಟನೆಗಳು ಸಕ್ರಿಯವಾಗಿ ರಂಗಪ್ರವೇಶ ಮಾಡಿವೆ. "ಅವಲೂಕುನ್ನಿ"ನಲ್ಲಿ ಹಿಂದುಳಿದ ವರ್ಗದ ಯುವತಿಯರ ಮೇಲೆ ಬಹಿರಂಗವಾಗಿ ಬಲಾತ್ಕಾರವೆಸಗಿದ ಸಮಾಜದ್ರೋಹಿಗಳನ್ನು ಶಿಕ್ಷಿಸುವುದರಲ್ಲಿಯೂ, ಮೂವಾಟ್ ಪ್ರಯುದಲ್ಲಿ "ಅಮ್ಮಿಣಿ ಅಂತರ್ಜನಂ"ರನ್ನು ಬಲಾತ್ಕಾರ ನಡೆಸಿ ಕೊಲೆಗೈದ ಕೊಲೆಗಡುಕನಿಗೆ ಗೃಹ ಮಂತ್ರಿ ಕೆ. ಎಂ. ಮಾಣಿ

[6ನೇ ಪುಟ ನೋಡಿ]

ದೊಡ್ಡಮಾಳವಾಡಿ ಗ್ರಾಮದಲ್ಲಿ ದಲಿತರ ಸಂಕಷ್ಟ

ಕುಣಿಗಲ್ ತಾಲ್ಲೂಕು ಹೆಬ್ಬೂರು ಮಾರ್ಗದ ದೊಡ್ಡಮಾಳವಾಡಿಯಲ್ಲಿ ಸುಮಾರು 25 ದಲಿತಕುಟುಂಬಗಳು ವಾಸಿಸುತ್ತಿದ್ದಾರೆ. ಇವರೆಲ್ಲ ಭೂಹೀನರೂ ಆರ್ಥಿಕ ಸಾಮಾಜಿಕವಾಗಿ ಶೋಷಣೆಗೊಳಪಟ್ಟವರೂ ಆಗಿದ್ದಾರೆ. ಶ್ರೀ ಅಂದಾನಯ್ಯ (ಎಂ.ಎಲ್.ಎ), ಬ್ಲಾಕ್‌ಡೆವಲಪ್‌ಮೆಂಟ್ ಆಫೀಸರ್, ಶ್ರೀ ಶಿವಣ್ಣ ಇಪ್ಪಾಡಿ, ಮಾದೇವಗೌಡ, ಚೌಕೀನಹಳ್ಳಿ ನಿಂಗಪ್ಪ (ತಾಲ್ಲೂಕು ಸಮಿತಿ ಸದಸ್ಯರು), ನರಸಪ್ಪ (ಗ್ರಾಮ ಪಂಚಾಯಿತಿ ಅಧ್ಯಕ್ಷ) ಇವರುಗಳು ಆ ಗ್ರಾಮಕ್ಕೆ ಬಂದು, ಅಲ್ಲಿದ್ದ 25 ಕುಟುಂಬಗಳಿಗೆ ಹೊಸ ಮನೆಗಳನ್ನು ಕಟ್ಟಿಸಿಕೊಡುವುದಾಗಿ ಹೇಳಿ ಅವರನ್ನು ಊರಿನಿಂದ ಎರಡು ಫರ್ಲಾಂಗ್ ದೂರಕ್ಕೆ ಒಕ್ಕಲೆಬ್ಬಿಸಿ ಕಳಿಸಿದ್ದಾರೆಂದು ವರದಿಯಾಗಿದೆ. ಇದು ನಡೆದು ಮೂರು ನಾಲ್ಕು ತಿಂಗಳಾದರೂ ಆಶ್ವಾಸನೆ ಈಡೇರದೆ ದಲಿತ ಕುಟುಂಬಗಳು ತುಂಬ ಕಷ್ಟಕ್ಕೆ ಈಡಾಗಿವೆ, ಅಲ್ಲದೆ ಆ ಊರಿನಲ್ಲೇ ಇರುವ ಜಮೀನ್ದಾರರೊಬ್ಬರು ಊರಿನ ದಲಿತರಿಗೆ ಸೇರಬೇಕಾದ ಜಾಗದಲ್ಲಿ (ಗ್ರಾಮಠಾಣ್ಯ) ಮನೆ ಕಟ್ಟಿಕೊಂಡು ಆ ಜಾಗ ಬಿಡದೆ ಹಟ ಹಿಡಿದಿದ್ದಾರೆ. ಇವೆಲ್ಲದರ ಬಗ್ಗೆ ತಾಲ್ಲೂಕು ಅಧಿಕಾರಿಗಳು, ಜಿಲ್ಲಾ ಅಸಿಸ್ಟೆಂಟ್ ಕಮೀಷನರ್ ಇವರಿಗೆ ದೂರು ಸಲ್ಲಿಸಲಾಗಿದೆ. ಕುಣಿಗಲ್ ತಾಲ್ಲೂಕಿನ ಸರ್ಕಲ್ ಇನ್ಸ್‌ಪೆಕ್ಟರ್ ಅವರು 26.3.79ರಲ್ಲಿ ಇಲ್ಲಿಗೆ ಭೇಟಿ ನೀಡಿ, ದಲಿತರಿಗೆ ಸಮಾಧಾನದ ಮಾತು ಹೇಳಿ ಒಟ್ಟಾರೆ ಉಳಿದವರಿಗೆ ಸಹಾಯ ಮಾಡಿಹೋಗಿದ್ದಾರೆ. ಈ ಎಲ್ಲ ಸುದ್ದಿ ತಿಳಿದ ದಲಿತ ಸಂಘರ್ಷ ಸಮಿತಿಯವರು ಈ ಗ್ರಾಮಕ್ಕೆ ಭೇಟಿ ನೀಡಿ ಈ ಸಮಸ್ಯೆಯ ಪರಿಹಾರಕ್ಕೆ ಹೋರಾಟ ನಡೆಸಲು ನಿರ್ಧರಿಸಿದ್ದಾರೆ. ○

ಸಾಮೆತ್ತಡ್ಕದಲ್ಲಿ ದಲಿತರ ಹೋರಾಟ

ದ. ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸಾಮೆತ್ತಡ್ಕದಲ್ಲಿ ಹರಿಜನರಿಗೆ ಸೇರಿದ ಅವರು ಹಲವಾರು ವರ್ಷಗಳಿಂದ ವಾಸಿಸುತ್ತಿರುವ ಜಮೀನುಗಳನ್ನು ಬೇರೆಯವರ ಹೆಸರಿಗೆ ದರಖಾಸ್ತು ಮಾಡಿಕೊಡಲಾಗುತ್ತಿದೆ. ಹರಿಜನರು ಉತ್ತು ಬಿತ್ತು ಬೆಳೆಸಿದ ಜಮೀನನ್ನು ಅಧಿಕಾರಿಗಳ ನೆರವಿನಿಂದ ಇತರರು ಅಕ್ರಮವಾಗಿ ಸ್ವಾಧೀನ ಪಡೆದುಕೊಂಡು ಅನ್ಯಾಯ ಮಾಡುತ್ತಿದ್ದಾರೆ. ದಲಿತರ ಈ ದುಸ್ಥಿತಿಯ ನಿವಾರಣೆಗಾಗಿ ದಲಿತ ಸಂಘರ್ಷ ಸಮಿತಿಯ ಬೆಂಬಲದಿಂದ ಪುತ್ತೂರು ತಾಲ್ಲೂಕು ಕಚೇರಿಯ ಮುಂದೆ ಅನಿರ್ದಿಷ್ಟ ಸತ್ಯಾಗ್ರಹ ನಡೆಸಲಾಗುತ್ತಿದೆ. ○

ಕೇರಳ ಪತ್ರ

[5ನೇ ಪುಟದಿಂದ]

ಬಹಿರಂಗವಾಗಿ ಬೆಂಬಲ ಕೊಟ್ಟುದುದರಿಂದಲೂ ಕೇರಳದ ಅರಾಜಕತ್ವ ಆಡಳಿತದಲ್ಲಿ ಸ್ತ್ರೀಯರಿಗಿರುವ ರೋಶವನ್ನು ವ್ಯಕ್ತಪಡಿಸಲು ಮಹಿಳಾ ಸಂಘದ ಕಾರ್ಯಕರ್ತರು ಅತ್ಯಾವೇಶದಿಂದ ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ.

ಭೂ ಮಸೂದೆಯನ್ನು ಸುರಂಗ ಕೊರೆಯುವ ಇಪ್ಪದಾನ ಕಾಯಿದೆ, ನ್ಯಾಯಸಮ್ಮತವಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು, ಸರಕಾರೀ ನೌಕರರೂ, ಇತರ ನೌಕರರೂ ನಡೆಸುತ್ತಿದ್ದ ಮುಷ್ಕರಗಳನ್ನು ಮುರಿಯಲು ತಂದ ಡೈಸ್-ನೋನ್, ಮೊದಲಾದುವುಗಳೂ ಕಾಲೇಜು ಅಧ್ಯಾಪಕರು "ಒಂದು ದಿನ ಮುಷ್ಕರ ಹೂಡಿದರೆ ಎರಡು ತಿಂಗಳ ವೇತನವಿಲ್ಲ"ವೆಂಬ ಸರ್ವಕಲಾಶಾಲಾ ಮಸೂದೆಯ ತಿದ್ದುಪಡಿ, ಹಿಂದುಳಿದ ಜಾತಿಯವರಿಗೆ (ವರ್ಗದವರಿಗೆ) 'ಸಂವರಣ' (ಖಾದಿರಿಸುವಿಕೆಯ)ದ ಅನುಕೂಲತೆಯು ದೊರೆಯದಂತೆ ನೆಟ್ಟೂರು ಕಮಿಷನ್ ವಂದಿಯನ್ನು ಜಾರಿಗೊಳಿಸದಿರುವುದು–ಇವೇ ಮೊದಲಾದ ಜನವಿರೋಧಿ ನಿಯಮಗಳನ್ನು ಪದೇ ಪದೇ ತರುವ ಕೇರಳದ ಆಳುವರಂಗಕ್ಕೆ ಈ ಸುವರ್ಣಾವಸರವನ್ನು ಉಪಯೋಗಿಸಿ ಸಮಸ್ತ ಮತದಾರರು ಪ್ರಬಲವಾದ ಏಟು ಕೊಡುವರೆಂಬುದರಲ್ಲಿ ಸಂಶಯವಿಲ್ಲ. ●

ಬಿಜಾಪುರ ನಗರಸಭೆ ನೌಕರರ ಮುಷ್ಕರ

ಬಿಜಾಪುರ ರಾಯಚೂರುಗಳಲ್ಲಿ ಏಪ್ರಿಲ್-ಮೇ ತಿಂಗಳು ಬಿಸಿಲು ಅಧಿಕವಾಗಿರುವುದರಿಂದ ಸರ್ಕಾರಿ ಕಚೇರಿಗಳು ಮುಂಜಾನೆಯಿಂದ ಮಧ್ಯಾಹ್ನದವರೆಗೆ ನಡೆಯತಕ್ಕದ್ದೆಂದು 4 ವರ್ಷಗಳ ಹಿಂದೆ ಸರ್ಕಾರ ಪ್ರಕಟಿಸಿತ್ತು. ಅದರಂತೆ, ಬಿಜಾಪುರ ನಗರಸಭೆಯ ಕಚೇರಿಯು ಮುಂಜಾನೆ 6 ರಿಂದ ಮಧ್ಯಾಹ್ನ 1ರ ವರೆಗೆ ನಡೆಯುತ್ತಿತ್ತು. ಆದರೆ ಈ ವರ್ಷ ನಗರಸಭೆಯವರು ಈ ಪದ್ಧತಿ ಒಪ್ಪಲಿಲ್ಲ. ಆದ್ದರಿಂದ ಪೌರಕಾರ್ಮಿಕರು ಈ ಬೇಡಿಕೆಯ ಈಡೇರಿಕೆಗಾಗಿ ಮುಷ್ಕರ ನಡೆಸಿದರು. ಮೂರುದಿನಗಳ ಮುಷ್ಕರದ ನಂತರ ನಗರಸಭೆ ಅಧಿಕಾರಿಗಳು ಮತ್ತು ಪೌರಕಾರ್ಮಿಕರ ಸಂಘದ ಅಧ್ಯಕ್ಷ ಎನ್. ಕೆ. ಉಪಾಧ್ಯಾಯ ಮತ್ತು ಕಾರ್ಯದರ್ಶಿ ಸೊನ್ನದ ಅವರ ನಡುವೆ ಸಂಧಾನ ನಡೆದು ಈ ಬೇಡಿಕೆಯನ್ನು ಒಪ್ಪಿಕೊಳ್ಳಲಾಗಿದೆ.

ಚಿಂತಾಮಣಿಯಲ್ಲಿ ಪುರಸಭೆ ವಿರುದ್ಧ ಪ್ರತಿಭಟನೆ

ಕೋಲಾರ ಜಿಲ್ಲೆ ಚಿಂತಾಮಣಿಯ ಪುರಸಭೆಯ ಆಡಳಿತ ವೈಖರಿಯನ್ನು ಪ್ರತಿಭಟಿಸಿ ಅಲ್ಲಿನ ನಾಗರಿಕರು ತಾ. 16-4-79 ರಂದು ಪ್ರತಿಭಟನೆ ನಡೆಸಿದರು. ನೀರು, ಕಕ್ಕಸ್ಸಿನ ಅನುಕೂಲ, ಮನೆಗಂದಾಯ ರದ್ದತಿ, ಹರಿಜನರಿಗೆ ನಿವೇಶನ ಹಂಚಿಕೆ ಮುಂತಾದ ಬೇಡಿಕೆಗಳ ಈಡೇರಿಕೆಗಾಗಿ ಸುಮಾರು 500 ನಾಗರಿಕರು ಪುರಸಭಾ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು. ○

ಹಾಸನ ಜೀವವಿಮೆ ನೌಕರರ ಮುಷ್ಕರ

ಜೀವವಿಮಾ ಕಾರ್ಪೊರೇಷನ್ನಿನ ಹಾಸನ ಶಾಖೆಯ ನೌಕರರು, ತಮ್ಮ ಬೇಡಿಕೆಗಳಾದ ವೇತನ ಪರಿಷ್ಕರಣ, ಬೋನಸ್ ಇವುಗಳ ಬಗ್ಗೆ ಆಡಳಿತ ವರ್ಗವನ್ನು ಒತ್ತಾಯಿಸಲು ದಿನಾಂಕ 4-5-79 ರಂದು ಕಚೇರಿಯಿಂದ 2 ಗಂಟೆಗಳ ಕಾಲ ಹೊರಗಿದ್ದು ಮುಷ್ಕರ ನಡೆಸಿದರು. ಇಲ್ಲಿನ 3 ಮತ್ತು 4 ನೇ ದರ್ಜೆ ನೌಕರರ ಸಂಘಗಳು ಈ ಮುಷ್ಕರಕ್ಕೆ ಬೆಂಬಲ ನೀಡಿದ್ದವು. ○

ರಾಜ್ಯಾದ್ಯಂತ ನಗರಸಭೆ ನೌಕರರ ಹೋರಾಟ

ನಿವೃತ್ತಿ ವೇತನ, ಸೀನಿಯಾರಿಟಿ, ಮೊದಲಾದ ಬೇಡಿಕೆಗಳ ಈಡೇರಿಕೆಗಾಗಿ ನಗರಸಭೆ ನೌಕರರು 4-5 ವರ್ಷಗಳಿಂದಲೂ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಆದರೆ ಸರ್ಕಾರ ಈ ಬಗ್ಗೆ ಗಮನ ಹರಿಸದೆ ಇರುವುದರಿಂದ ರಾಜ್ಯಾದ್ಯಂತ ನಗರ ಸಭೆ ನೌಕರರು ಮೇ ಒಂದರಿಂದ ಮುಷ್ಕರ ನಡೆಸಬೇಕೆಂದು, ನಗರಸಭೆ ಕಚೇರಿಗಳ ಮುಂದೆ ಅನ್ನ ಸತ್ಯಾಗ್ರಹ ನಡೆಸಬೇಕೆಂದು, ಗುಲ್ಬರ್ಗಾದಲ್ಲಿ ಸಭೆ ಸೇರಿದ್ದ ಕರ್ನಾಟಕ ರಾಜ್ಯ ನಗರಸಭೆ ನೌಕರರ ಫೆಡರೇಶನ್ ತೀರ್ಮಾನಿಸಿತ್ತು. ಈ ಪ್ರಕಾರ ರಾಜ್ಯದ ವಿವಿಧ ನಗರಸಭೆಗಳ ನೌಕರರು ಹೋರಾಟವನ್ನು ಆರಂಭಿಸಿದ್ದಾರೆ. ಬಿಜಾಪುರ, ಮೈಸೂರು, ತಿಪಟೂರು, ಶಿಡ್ಲಘಟ್ಟ, ಸಕಲೇಶಪುರ ಮುಂತಾದ ನಗರಸಭೆ-ಪುರಸಭೆಗಳ ನೌಕರರು ಮುಷ್ಕರ, ಅನ್ನ ಸತ್ಯಾಗ್ರಹಗಳನ್ನು ನಡೆಸುತ್ತಿದ್ದಾರೆ. ಇದನ್ನು ಯಶಸ್ವಿಗೊಳಿಸಬೇಕೆಂದು ರಾಜ್ಯದ ನಗರಸಭೆ ನೌಕರರ ಫೆಡರೇಶನ್ ಕೋರಿದೆ.

●

ಕಾರವಾರ ತಾಲ್ಲೂಕು ರೈತ ಸಂಘ ಸಮ್ಮೇಳನ

ಕಾರವಾರ ತಾಲ್ಲೂಕು ಕಿಸಾನ್ ಸಭಾ ಘಟಕದ ಸಮ್ಮೇಳನವು 30-4-79 ಮತ್ತು 1-5-79 ರಂದು ಉಳಗದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಕಾಂ. ಪಿ. ರಾಮಚಂದ್ರ ರಾವ್ ಅವರು ಕಿಸಾನ್‌ಸಭೆ ಕಚೇರಿ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದರು. ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾಂ. ಎಂ. ಕೆ. ಭಟ್ ಮತ್ತು ಕಾಂ. ಆರ್. ಜಿ. ಸ್ಥಳೇಕರ್ ಅವರು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಗೇಣಿ ರೈತರಿಗೆ ಮುಫತ್ತಾಗಿ ಜಮೀನು ನೀಡಿಕೆ, ಸಾಲಗಳ ರದ್ದತಿ, ಕೃಷಿಕಾರ್ಮಿಕರಿಗೆ ಕನಿಷ್ಠ ವೇತನದ ಬಗ್ಗೆ ಕಾನೂನು, ಬಡಜನರಿಗೆ ಜಮೀನು ಹಂಚಿಕೆ, ನಿರುದ್ಯೋಗಿಗಳಿಗೆ ಉದ್ಯೋಗ, ಅಥವಾ ನಿರುದ್ಯೋಗ ಭತ್ತೆ ನೀಡಿಕೆ–ಮುಂತಾದ ವಿಚಾರಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

○

ಕುಂದಾಪುರ ತಾಲ್ಲೂಕು ಯುವಜನ ಸಮಾವೇಶ

ಕುಂದಾಪುರ ತಾಲ್ಲೂಕು ಯುವಜನರ ಸಮಾವೇಶವು ವಡೇರ ಹೋಬಳಿ ಶಾಲಾಪಠಾರದಲ್ಲಿ ತಾರೀಕು 29-4-79 ರಂದು ನಡೆಯಿತು. ಕಾಂ. ಕೆ. ಶಂಕರನ್ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಮಾವೇಶದಲ್ಲಿ ಸುತ್ತಲಿನ ಗ್ರಾಮಗಳ ಯುವಕ ಪ್ರತಿನಿಧಿಗಳು ಭಾಗವಹಿಸಿದ್ದರು. ಆನಂದ ಭಂಡಾರಿಯವರು ಸ್ವಾಗತಿಸಿದ ನಂತರ ವೆಂಕಟೇಶ ನಾಯಕ್ ಅವರು ವರದಿಯನ್ನು ಓದಿದರು.

ಪ್ರತಿಗಾಮಿಗಳು ಯುವಜನರನ್ನು ಅಡ್ಡದಾರಿಗೆ ಒಯ್ಯುವುದರ ಬಗ್ಗೆ ಎಚ್ಚರಿಸಿದ ಮುಖ್ಯ ಅತಿಥಿಗಳಾದ ವಿಮಾ ನೌಕರರ ಸಂಘದ ಉಪಾಧ್ಯಕ್ಷರು ಯುವಜನರು ಸಂಘಟಿತರಾಗಬೇಕೆಂದು ಕರೆಕೊಟ್ಟರು. ಕರ್ನಾಟಕ ಎಸ್. ಎಫ್. ಐ. ಕಾರ್ಯದರ್ಶಿಗಳಾದ ಶಾಂತರೇಣುಕಾರಾಧ್ಯ ಅವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಕುಂದಾಪುರ ತಾಲ್ಲೂಕು ರೈತ ಕಾರ್ಮಿಕ ಮುಖಂಡರಾದ ಕಾಂ. ಅಬ್ರಹಾಂಕರ್ಕಡ ಮತ್ತು ಸಿ. ನಾರಾಯಣ ಅವರು ಯುವಜನರಿಗೆ ಪ್ರಜಾಸತ್ತಾತ್ಮಕ ಹೋರಾಟ ನಡೆಸಲು ಕರೆಯಿತ್ತರು.

ಕರ್ನಾಟಕ ರಾಜ್ಯದ ಪ್ರಮುಖ ಮುಂದಾಳು ಕಾಂ. ಪಿ. ರಾಮಚಂದ್ರ ರಾವ್ ಅವರು ಮಾತನಾಡಿ ಸಮಾಜದ ಬದಲಾವಣೆಗೆ ಯುವಜನರು ಮುಂದಾಗಬೇಕೆಂದು ಆಶಿಸಿ ಕರೆಕೊಟ್ಟರು.

ಪ್ರತಿನಿಧಿಗಳ ಭಾಷಣದ ನಂತರ ತಾಲ್ಲೂಕು ಸಮಿತಿಗೆ 22 ಜನ ಸದಸ್ಯರನ್ನು ಆಯ್ಕೆಮಾಡಲಾಯಿತು.

○

ತಿತಿಮತಿ ನಿವಾಸಿಗಳ ಪಕ್ಷದ ಅಭಿನಂದನೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ವೀರಾಜಪೇಟೆ ಶಾಖೆಯು, ಸರಕಾರದ ಅಧಿಕಾರಿಗಳ ದುಷ್ಟನೀತಿಯ ವಿರುದ್ಧ ಹೋರಾಡಿದ ತಿತಿಮತಿಯ ಅರಣ್ಯವಾಸಿಗಳಿಗೆ ಅಭಿನಂದನೆ ಸಲ್ಲಿಸುತ್ತದೆ. ಹೊರದೂಡಲ್ಪಟ್ಟ ರೈತ ಕುಟುಂಬಗಳಿಗೆ ಸೌಲಭ್ಯಗಳು ಭೂಮಿ ಮತ್ತು ಪರಿಹಾರ ಹಣವನ್ನು ಕೊಡುವಂತೆ ಪಕ್ಷವು ಸರಕಾರವನ್ನು ಒತ್ತಾಯಿಸುತ್ತದೆ. ಅರಣ್ಯವಾಸಿಗಳ ಹೋರಾಟಗಳಿಗೆ ಸದಾ ಬೆಂಬಲ ಕೊಡುವ ಭರವಸೆ ನೀಡುವ ಪಕ್ಷವು ತನ್ನ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಅರಣ್ಯವಾಸಿಗಳು ಸಹಕಾರ ನೀಡಬೇಕೆಂದು ವಿನಂತಿಸುತ್ತದೆ.

○

ವಿನೋಬಾ ಉಪವಾಸಕ್ಕೆ ಪ್ರತಿಭಟನೆ

ಧಾರವಾಡದ ಕರ್ನಾಟಕ ಯುವಜನ ಕ್ರಾಂತಿದಳದವರು 26-4-79 ರಂದು ಹೋರಾಟಾದರಿಯ ಪ್ರತಿಭಟನೆ ನಡೆಸಿ ಜನತೆಯ ಗಮನ ಸೆಳೆದರು. ಗೋಹತ್ಯಾ ನಿಷೇಧಕ್ಕಾಗಿ ವಿನೋಬಾ ಭಾವೆಯವರು ಕೈಗೊಂಡಿದ್ದ ಉಪವಾಸ ಸತ್ಯಾಗ್ರಹದ ವಿರುದ್ಧ ಈ ತರುಣರು ಪ್ರತಿಭಟನೆ ಸೂಚಿಸಿದರು. "ಜನಹತ್ಯೆ ಬೆಂಬಲಿಸಿ ಗೋಹತ್ಯೆ ವಿರೋಧಿಸುವ ವಿನೋಬಾರಿಗೆ ಧಿಕ್ಕಾರ" ಎಂದು ಅವರು ಕೂಗಿ, ವಿನೋಬಾ ಅವರ ಇತ್ತೀಚಿನ ವರ್ತನೆಗಳ ನಿಲುವುಗಳನ್ನು ಖಂಡಿಸುವ ಫಲಕಗಳನ್ನು ಹೊತ್ತುಕೊಂಡು ಮೆರವಣಿಗೆ ನಡೆಸಿದರು. ○

ಬೀಡಿ ಲೇಬರ್ ಸಂಘ ವಾರ್ಷಿಕ ಸಭೆ

ಉಡುಪಿ ತಾಲ್ಲೂಕು ಮುಲ್ಕಿಯ ಬೀಡಿ ಲೇಬರ್ ಯೂನಿಯನ್‌ನ 6ನೇ ವಾರ್ಷಿಕ ಸಭೆಯು ತಾ. 22-4-79 ರಂದು ಪಡುಬಿದ್ರಿಯಲ್ಲಿ ನಡೆಯಿತು. ಮುಖ್ಯ ಅತಿಥಿ ಕಾಂ. ಡೇವಿಡ್‌ಕರ್ಕಡ ಅವರು ಬೀಡಿ ಕೆಲಸಗಾರರ ಸಂಘಟನೆ ಬಲಗೊಳ್ಳಬೇಕೆಂದು ಹೇಳಿದರು. ಮದರಾಸಿನ ಸಿ. ಐ. ಟಿ. ಯು. ಸಮ್ಮೇಳನದ ನಿರ್ಣಯಗಳನ್ನು ಸಭೆಗೆ ತಿಳಿಸಿದರು.

○

ತೋಟ ಕಾರ್ಮಿಕ ಸಂಘದ ಸಭೆ

ಕರ್ನಾಟಕ ತೋಟಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು 29-4-79 ರಂದು ಸಕಲೇಶಪುರದಲ್ಲಿ ನಡೆಯಿತು. ಕಾಂ. ಸಿ. ನಂಜುಂಡಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾಂ. ವಿ. ಸುಕುಮಾರ್ ಅವರು ವರದಿ ಒಪ್ಪಿಸಿದರು. ಕಾಕೋಡು ಎಸ್ಟೇಟ್ ಆಡಳಿತವರ್ಗದ ನೀತಿಯ ವಿರುದ್ಧ ಈ ಮೇ 20ರಿಂದ ಮುಷ್ಕರ ನಡೆಸಲು ತೀರ್ಮಾನಿಸಲಾಯಿತು. ರಾಜ್ಯದ ವಿವಿಧ ಕಡೆಗಳ ಮುಷ್ಕರಗಳಿಗೆ ಬೆಂಬಲ ಸೂಚಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

○

ಚಿಕ್ಕಬಳ್ಳಾಪುರ ಪುರಸಭೆ ಮೀಟಿಂಗ್‌ಗೆ ಬಹಿಷ್ಕಾರ

26-4-79ರ ಚಿಕ್ಕಬಳ್ಳಾಪುರ ಪುರಸಭೆ ಮೀಟಿಂಗನ್ನು ಬಹಿಷ್ಕರಿಸಿ ವಿರೋಧಿ ಗುಂಪಿನ ಒಂಬತ್ತು ಜನ ಸದಸ್ಯರು ಹೇಳಿಕೆ ಕೊಟ್ಟಿದ್ದಾರೆ. ಊರಿನ ನೀರಿನ ವ್ಯವಸ್ಥೆಯ ಅಸಮರ್ಪಕತೆ, ಬಡವರಿಗೆ ಈವರೆಗೂ ನಿವೇಶನ ಹಂಚದಿರುವದು, ಮುನಿಸಿಪಲ್ ಕಾಲೇಜಿನ ಗೌವರ್ನಿಂಗ್ ಕೌನ್ಸಿಲ್‌ನ ಭ್ರಷ್ಟಾಚಾರ, ಸ್ಟ್ಯಾಂಡಿಗ್ ಕಮಿಟಿ ಸಭೆ ಕರೆಯದ್ದೆ, ಟೆಂಡರ್ ಕರೆಯದೆ, ಕಾರ್ಯನಡೆಯುತ್ತಿರುವುದು, ಪುರಸಭೆಯ ಭ್ರಷ್ಟಾಚಾರ ಇವುಗಳನ್ನು ಪ್ರತಿಭಟಿಸಿ, ಜಿ. ವೆಂಕಟರಾಮಯ್ಯ, ಕೆ. ಎಂ. ಶ್ರೀನಿವಾಸ್, ಎಂ. ಶ್ರೀನಿವಾಸಮೂರ್ತಿ, ಎಸ್. ಲಕ್ಷ್ಮಯ್ಯ, ಸಿ. ವಿ. ವೆಂಕಟರಾಯಪ್ಪ, ಬಷೀರ್ ಅಹಮದ್, ಜಿ. ಮುನಿಯಪ್ಪ (ಉಪಾಧ್ಯಕ್ಷ), ಬಿ. ಎಸ್. ಪುಟ್ಟೂರಾವ್ ಇವರುಗಳು ಮೀಟಿಂಗನ್ನು ಬಹಿಷ್ಕರಿಸಿದ್ದಾರೆ.

○

ಯುವಕರಿಂದ ಕಾರ್ಯಕ್ರಮ

ಪ್ರಜಾಸತ್ತಾತ್ಮಕ ಯುವಕರ ಫೆಡರೇಶನ್ (DYF)ಗೆ ಸೇರ್ಪಡೆಯಾಗಿರುವ ಸಿಂಧನೂರಿನ ಸಮಾಜ ಕಲ್ಯಾಣ ಯುವಕರ ಸಂಘ, ಸಮಾಜದ ಸಮಸ್ಯೆಗಳಾದ ಶೋಷಣೆ, ನಿರುದ್ಯೋಗ, ಬಡತನ, ಭಿಕ್ಷಾಟನೆ, ವೇಶ್ಯಾವೃತ್ತಿ ಮುಂತಾದ ಸಮಸ್ಯೆಗಳ ವಿರುದ್ಧ ಹಾಗೂ ಸ್ಥಳೀಯ ಸಮಸ್ಯೆಗಳ ನಿವಾರಣೆಗೆ ಕಾರ್ಯಕ್ರಮ ಹಾಕಿದೆ. ಈ ಬಗ್ಗೆ ಎಲ್ಲರೂ ಸಹಕರಿಸಬೇಕೆಂದು ಸಿಂಧನೂರಿನ ಯುವಕರು ಮತ್ತು ಜನತೆಯಲ್ಲಿ ಕೇಳಿಕೊಂಡಿದೆ.

○

ದ.ಕ. ಜಿಲ್ಲೆಯ ಉಲ್ಲಾಳದಲ್ಲಿ ದಿನಬಳಕೆಯ ದಿನಸಿಗೆ ಒತ್ತಾಯ

ನ್ಯಾಯ ಬೆಲೆಯಲ್ಲಿ ಅಕ್ಕಿ ಒದಗಿಸಲು ಒತ್ತಾಯ:

ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳದಲ್ಲಿ ಸರ್ಕಾರ ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳಲ್ಲಿ ದಿನ ನಿತ್ಯ ಬಳಕೆಯ ದವಸಧಾನ್ಯಗಳು ಸಿಕ್ಕುತ್ತಿಲ್ಲವೆಂತಲೂ ಮತ್ತು ಇದೇ ದವಸಧಾನ್ಯಗಳು ಅಲ್ಲಿನ ಖಾಸಗಿ ಅಂಗಡಿಗಳಲ್ಲಿ ದುಬಾರಿಬೆಲೆಯಲ್ಲಿ ಸಿಕ್ಕುತ್ತಿವೆ ಎಂದು ಅಲ್ಲಿನ ನಾಗರೀಕರು ದೂರಿತ್ತಿದ್ದಾರೆ. ದಿನಬಳಕೆಯ ವಸ್ತುಗಳ ಅಭಾವದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದರೂ ಅವರು ಯಾವ ಕ್ರಮಗಳನ್ನೂ ತೆಗೆದುಕೊಂಡಿಲ್ಲವೆಂದಿರುವ ನಾಗರೀಕರು, ಸರ್ಕಾರ ಮತ್ತು ಸ್ಥಳೀಯ ಶಾಸಕರು ಮಧ್ಯ ಪ್ರವೇಶಿಸಿ ಬಳಕೆದಾರರ ಬವಣೆಯನ್ನು ನೀಗಿಸಿಕೊಡಬೇಕೆಂದು ಒತ್ತಾಯಿಸಿದ್ದಾರೆ. ○

ತುಮಕೂರು ನಗರಸಭೆ ವಿರುದ್ಧ ಹೋರಾಟ

ತುಮಕೂರು ನಗರಸಭೆಯ ದುರಾಡಳಿತವನ್ನು ವಿರೋಧಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಶಾಖೆಯ ನಗರ ಸಮಿತಿಯು ಹೋರಾಟ ನಡೆಸಲೆತ್ನಿಸಿದೆ. ನೀರಿನ ವ್ಯವಸ್ಥೆ, ರಸ್ತೆ ರಿಪೇರಿ, ಸೊಳ್ಳೆಗಳ ನಿವಾರಣೆ, ನಿವೇಶನ ಹಂಚುವುದು, ಇವುಗಳ ಬಗ್ಗೆ ನಗರಸಭೆ ಗಮನವನ್ನೇ ಕೊಟ್ಟಿಲ್ಲ. ಕಂದಾಯ ಏರಿಕೆ ವರ್ಷೇ ವರ್ಷೇ ಹೆಚ್ಚುತ್ತಿದೆ. ಈ ಜುಕೊಳ, ರಂಗಮಂಟಪಗಳ ನಿರ್ಮಾಣ ಕೈಗೊಂಡಿಲ್ಲ. ನಗರಸಭೆ ಲಂಚದ ತವರಾಗಿದೆ. ಇವೆಲ್ಲದರ ಬಗ್ಗೆ ನಗರಸಭೆಯು ಗಮನ ಸೆಳೆಯಲು ಪಕ್ಷದ ನಗರಸಮಿತಿಯು 26.4.79 ರಂದು ಪ್ರತಿಭಟನಾ ಪ್ರದರ್ಶನ ನಡೆಸಿತು. ಕಾಂ. ಎಚ್.ಸಿ. ಚನ್ನಪ್ಪ, ಕೆ. ಆರ್. ನಾಯಕ್, ಮಹಮದ್ ದಸ್ತಗೀರ್, ಟಿ. ಎಲ್. ತಿಮ್ಮಪ್ಪ, ಸೈಯದ್ ಕರೀಂ ಇವರುಗಳು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಅರ್ಪಿಸಿದರು. ನಂತರ ಸಾರ್ವಜನಿಕ ಸಭೆ ನಡೆಯಿತು.

ಶತಮಾನಗಳ ಹಿಂದೆ
ನಾನು—
ಕೇವಲ ಮಾನವಾತೀತ ರಹಸ್ಯಗಳನ್ನು
ಕಲೆ ಹಾಕುವ ಕವಿಯಾಗಿದ್ದೆ...
ಆದರೆ
ಈ ಇಪ್ಪತ್ತನೇ ಶತಮಾನದಲ್ಲಿ
ನಾನೊಂದು ಕ್ರಾಂತಿಯ ಜ್ವಾಲಾಮುಖಿ.

—ಸಮಿಾ-ಅಲ್-ಕಾಸಿಮ್

ಪ್ರಾಂತ ರೈತ ಸಂಘದ 6ನೇ ರಾಜ್ಯ ಸಮ್ಮೇಳನ

[ಒಂದನೇ ಪುಟದಿಂದ]

ಬಲಿಷ್ಠ ಸಂಘಟನೆ ಮಾಡಲು ಕರೆಯಿತ್ತರು. ಬಡರೈತರು, ಮಧ್ಯಮ ರೈತರು ಮತ್ತು ಕೃಷಿಕೂಲಿಗಾರರ ಐಕ್ಯತೆಯನ್ನು ಬೆಳೆಸಲು ಶ್ರಮಿಸಲೂ ಕರೆಯಿತ್ತರು.

ಸೌಹಾರ್ದ ಪ್ರತಿನಿಧಿಗಳಾಗಿ ಬಂದಿದ್ದ ಭಾರತ ವಿದ್ಯಾರ್ಥಿ ಫೆಡರೇಷನಿನ ರಾಜ್ಯ ಘಟಕದ ಅಧ್ಯಕ್ಷ ಕಾಂ. ಇಕ್ಬಾಲ್ ಹುಸ್ಸೇನ್, ಜೀವವಿಮಾ ನೌಕರರ ಮುಂದಾಳು ಕಾಂ. ಬಿ. ಮಾಧವ, ಸಿ. ಐ. ಟಿ. ಯು. ರಾಜ್ಯ ಘಟಕದ ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಮೊದಲಾದವರು ಶುಭಾಶಯವನ್ನು ಕೋರಿದರು.

ನಿರ್ಣಯಗಳು :

ಸಮ್ಮೇಳನದ ಕೊನೆಯಲ್ಲಿ ಅನೇಕ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮುಖ್ಯನಿರ್ಣಯವು ರಾಜ್ಯದಾದ್ಯಂತ ಮುಖ್ಯವಾಗಿ ಬಾಧಿಸುವ ಕೆಲವು ಸಮಸ್ಯೆಗಳ ಮೇಲೆ ಬೇಡಿಕೆಗಳನ್ನು ಮುಂದಿಟ್ಟು, ಈ ಬೇಡಿಕೆಗಳ ಬಗ್ಗೆ ಸತತ ಹೋರಾಟ ಮತ್ತು ಸಂಯುಕ್ತ ಚಳುವಳಿಯನ್ನು ಬೆಳೆಸಲು ಕರೆಯಿತ್ತಿತು. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಬೆಳೆಸಲು ಶ್ರಮಿಸಲೂ ಮಾರ್ಗದರ್ಶನವಿತ್ತಿತು. ಮುಖ್ಯ ನಿರ್ಣಯದಲ್ಲಿ 1. ಗೇಣಿದಾರ ರೈತರಿಗೆ ಪರಿಹಾರ ವಸೂಲಿ ಮಾಡದೆ ಕೂಡಲೇ ಭೂಮಿಯ ಒಡೆತನ ಕೊಡಬೇಕು 2. ಬಡ ಮತ್ತು ಮಧ್ಯಮ ರೈತರ ಎಲ್ಲಾ ಸಾಲಗಳನ್ನು ರದ್ದುಗೊಳಿಸಬೇಕು; ಸುಲಭ ಬಡ್ಡಿಯಲ್ಲಿ ಹಳ್ಳಿಯ ಬಡವರಿಗೆ ಸಾಲಗಳನ್ನು ಕೊಡಬೇಕು 3. ಕೃಷಿಕೂಲಿಗಾರರಿಗೆ ದಿನಕ್ಕೆ ಕನಿಷ್ಟ ವೇತನ ಎಂಟು ರೂಪಾಯಿ ಸಿಗುವಂತಾಗಬೇಕು. 4. ಬಡ ಮತ್ತು ಮಧ್ಯಮ ರೈತರು ಬೆಳೆದ ಬೆಳೆಗೆ ಸರಿಯಾದ ದರ ನಿಗದಿ ಮಾಡಬೇಕು. 5. ಉಳುಮೆಗೆ ಯೋಗ್ಯವಾದ ಸರಕಾರಿ ಭೂಮಿ, ಭೂಮಾಲಕರ ಸ್ವಾಧೀನವಿರುವ ಹೆಚ್ಚುವರಿ ಭೂಮಿ, ಪ್ಲಾಂಟೇಷನ್ ಮಾಲಿಕರೂ, ಭೂಮಾಲಿಕರೂ ಆಕ್ರಮಿಸಿಕೊಂಡು ಅನುಭವಿಸುತ್ತಿರುವ ಸರಕಾರಿ ಭೂಮಿಗಳನ್ನು ಭೂಹೀನ, ಬಡಜನರಿಗೂ, ಕೃಷಿ ಕೂಲಿಗಾರರಿಗೂ ಹಂಚಬೇಕು. 6. ಜನತಾ ಮನೆ ಯೋಜನೆಯಲ್ಲಿ ಕೇವಲ ಮನೆ ಮಾತ್ರ ಕೊಡುವುದಲ್ಲ, ಕೃಷಿಮಾಡಿ ಜೀವನ ನಡೆಸಲು ಭೂಮಿಯನ್ನೂ ಒದಗಿಸಬೇಕು 7. ಗ್ರಾಮಾಂತರ ಪ್ರದೇಶದ ನಿರುದ್ಯೋಗದಲ್ಲಿರುವವರಿಗೆ ಉದ್ಯೋಗ ಕೊಡಬೇಕು; ಉದ್ಯೋಗ ಒದಗಿಸುವ ತನಕ ನಿರುದ್ಯೋಗ ಭತ್ತೆ ಈಯಬೇಕು-ಇತ್ಯಾದಿ ಬೇಡಿಕೆಗಳನ್ನು ಮುಂದಿಡಲಾಗಿದೆ. ಈ ಬೇಡಿಕೆಗಳಲ್ಲದೆ, ವಾರಾಹಿ ನದಿ ಯೋಜನೆಯಿಂದ ನಿರಾಶ್ರಿತರಾದ ಸಹಸ್ರಾರು ಮಂದಿ ಬಡವರಿಗೆ, ಬದಲೀ ವ್ಯವಸ್ಥೆಯನ್ನು ಒದಗಿಸಬೇಕು. ಸಾಮಾಜಿಕವಾಗಿ ಕೆಳತಳ್ಳಲ್ಪಟ್ಟ ದಲಿತರ ಮೇಲಿನ ಎಲ್ಲಾ ಆರ್ಥಿಕ ಸಾಮಾಜಿಕ ಅನ್ಯಾಯಗಳನ್ನು ಕೊನೆಗೊಳಿಸಬೇಕು; ರೆವಿನ್ಯೂ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಕೊನೆಗೊಳಿಸಬೇಕು-ಎಂಬುದರ ಮೇಲೂ ನಿರ್ಣಯಗಳನ್ನು ಕೈಗೊಳ್ಳಲಾಯ್ತು. ಪಶ್ಚಿಮ ಬಂಗಾಲ ಮತ್ತು ತ್ರಿಪುರಾದ ಎಡಪಕ್ಷದ ಸರಕಾರಗಳಿಗೆ ಬೆಂಬಲವನ್ನೂ ಸೂಚಿಸಲಾಯ್ತು.

ಮುಂದಿನ ಎರಡು, ಮೂರು ತಿಂಗಳುಗಳ ಕಾಲದಲ್ಲಿ ಬೇಡಿಕೆಗಳ ಈಡೇರುವಿಕೆಗಾಗಿ ಹೋರಾಟ ನಡೆಸಲು ತಯ್ಯಾರಿ ನಡೆಸಲೂ ಮುಖ್ಯ ನಿರ್ಣಯವು ಕರೆಯಿತ್ತು, ಸಹಸ್ರಾರು ಕಾರ್ಯಕರ್ತರುಗಳು ಬಂಧನವಾಗುವುದರ ಮೂಲಕ ಮತ್ತು ಸಂಯುಕ್ತ ಚಳುವಳಿಗಳ ಮೂಲಕ ಸತತ ಹೋರಾಟ ನಡೆಸಲು ಕರೆಯಿತ್ತಿತು.

ಹೊಸ ಪದಾಧಿಕಾರಿಗಳು ಮತ್ತು ರಾಜ್ಯ ಮಂಡಳಿ ಸದಸ್ಯರು :

ರಾಜ್ಯದ ಹಳ್ಳಿಯ ಬಡವರ ಸಂಘಟನೆ ಮತ್ತು ಹೋರಾಟಗಳಿಗೆ ಸಮರ್ಥ ನಾಯಕತ್ವವನ್ನೀಯಲು ಏಳುಮಂದಿ ಅಧಿಕಾರಿ ವರ್ಗದವರು ಮತ್ತು ಹದಿನೈದು ಮಂದಿಯ ಕಾರ್ಯಕಾರಿ ಸಮಿತಿಯೂ ಸೇರಿ 45 ಮಂದಿಯ ರಾಜ್ಯ ಮಂಡಳಿಯನ್ನು ಆರಿಸಲಾಯಿತು. ಅಧ್ಯಕ್ಷ: ಕಾಂ. ಮುಗವಾಳಪ್ಪ (ದೊಡ್ಡಬಳ್ಳಾಪುರ); ಪ್ರಧಾನ ಕಾರ್ಯದರ್ಶಿ: ಕಾಂ. ಪಿ. ರಾಮಚಂದ್ರರಾವ್ (ಮಂಗಳೂರು); ಉಪಾಧ್ಯಕ್ಷ 1: ಕಾಂ. ಎಚ್. ಸಿ. ಚೆನ್ನಪ್ಪ (ಗುಬ್ಬಿ); ಉಪಾಧ್ಯಕ್ಷ 2 : ಕಾಂ. ಎನ್. ಜಿ. ಮ್ಹಾಳೆಸೇಕರ್ (ಕಾರವಾರ); ಕಾರ್ಯದರ್ಶಿ 1 : ಕಾಂ. ಅಬ್ರಹಾಮ್ ಕರ್ಕಡ (ಕುಂದಾಪುರ); ಕಾರ್ಯದರ್ಶಿ 2 : ಕಾಂ. ಕೆ. ವೆಂಕಟೇಶ್ (ಶಿಡ್ಲಘಟ್ಟ); ಖಜಾಂಚಿ: ಕಾಂ. ಪಿ. ಜಗನ್ನಾಥ ಇವರನ್ನು ಆರಿಸಲಾಯಿತು.

ಕಾರ್ಯಕಾರಿ ಸಮಿತಿ : ಕಾಂ. ಯು. ಜನಾರ್ಧನ ನಾಯಕ್, ಕಾಂ. ಕೆ. ವಿ. ರಾವ್, ಕಾಂ. ಚೆನ್ನಬಸವಣ್ಣ, ಕಾಂ. ಕೆ. ಮೋನಪ್ಪ ಗೌಡ, ಕಾಂ. ಡೇವಿಡ್ ಕರ್ಕಡ, ಕಾಂ. ಎ. ಕೆ. ಭಟ್, ಕಾಂ. ಲಕ್ಷ್ಮಯ್ಯ, ಕಾಂ. ಲಕ್ಷ್ಮಣ ರೆಡ್ಡಿ, ಕಾಂ. ಆರ್. ವೆಂಕಟ್ರಾಮಯ್ಯ, ಕಾಂ. ಕೆ. ಎಸ್. ಶ್ರೀನಿವಾಸ್, ಕಾಂ. ಹರಿನಾರಾಯಣ, ಕಾಂ. ಬಂಗಾರೇಶ್ವರ ಕರಿಯಗೌಡ, ಕಾಂ. ಗಂಗಾಧರ ಪಲ್ಲೇದ, ಕಾಂ. ಚಿಕ್ಕವೀರಯ್ಯ, ಕಾಂ. ಅಹೋಬಲ ನಾಯಕ್ ಇವರುಗಳನ್ನು ಮಂಡಳಿಯು ಚುನಾಯಿಸಿತು. ರಾಜ್ಯ ಮಂಡಳಿಯ ಇತರ ಸದಸ್ಯರುಗಳು- ಕಾಂ. ಸೂರ್ಯನಾರಾಯಣ ಭಟ್, ಕಾಂ. ಕೆ. ಶಂಕರ್, ಕಾಂ. ಬಿ. ವಿಷ್ಣುಮೂರ್ತಿ, ಕಾಂ. ಟಿ. ಎಸ್. ಕೋಟ್ಯಾನ್, ಕಾಂ. ಲಕ್ಕಣ್ಣ, ಕಾಂ. ಶಾಮಣ್ಣ ರೆಡ್ಡಿ, ಕಾಂ. ರಾಮಭದ್ರಯ್ಯ, ಕಾಂ. ಲಿಂಗೇಗೌಡ, ಕಾಂ. ಸಜ್ಜನ, ಕಾಂ. ಕದಮ್, ಕಾಂ. ಕೆ. ಸುಕುಮಾರ್, ಕಾಂ. ಎಚ್. ಕೆ. ಅರ್ಜುನ್, ಕಾಂ. ತಂಗಿಡಪ್ಪ, ಕಾಂ. ಮುನಿಕೃಷ್ಣಪ್ಪ, ಕಾಂ. ಬಿ. ವಿ. ನಾಗಿರೆಡ್ಡಿ, ಉಳಿದ ಸ್ಥಾನಗಳನ್ನು ಮುಂದೆ ಭರ್ತಿ ಮಾಡಲೂ ತೀರ್ಮಾನಿಸಲಾಯ್ತು.

ರೈತ-ಕಾರ್ಮಿಕರ ಬೃಹತ್ ಮೆರವಣಿಗೆ, ಬಹಿರಂಗಸಭೆ

ಕರ್ನಾಟಕ ರಾಜ್ಯ ರೈತಸಂಘದ 6ನೇ ರಾಜ್ಯ ಸಮ್ಮೇಳನದ ಸಮಾರೋಪವಾಗಿ ಮೇ 14ರಂದು ಮಂಗಳೂರು ನಗರದಲ್ಲಿ ಜರುಗಿದ ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರಿಂದ ಕೂಡಿದ ರೈತ ಕಾರ್ಮಿಕರ ಬೃಹತ್ ಮೆರವಣಿಗೆ, ಬಹಿರಂಗ ಸಭೆಗಳು ಹೊಸ ಸ್ಫೂರ್ತಿಯನ್ನು ಎತ್ತಿ ತೋರುವಂತಿತ್ತು. ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಬಂದ ರೈತರು, ಕೃಷಿಕೂಲಿಗಾರರು ಮತ್ತು ನಗರದ ನಾನಾಕಡೆಗಳಿಂದ ಮೆರವಣಿಗೆಯಲ್ಲಿ ಬಂದ ಕಾರ್ಮಿಕರು ಒಟ್ಟಾಗಿ ಮುಖ್ಯ ಬೀದಿಗಳಲ್ಲಿ ನಡೆಸಿದ ಮೆರವಣಿಗೆ ಅಭೂತಪೂರ್ವ ದೃಶ್ಯವಾಗಿತ್ತು. ನಗರದ ನೆಹರೂ ಮೈದಾನದಲ್ಲಿ ಸೇರಿದ್ದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ರೈತಸಂಘದ ಅಧ್ಯಕ್ಷ ಕಾಂ. ಮುಗವಾಳಪ್ಪ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಎಚ್. ಸಿ. ಚೆನ್ನಪ್ಪ, ಕಾಂ. ಎನ್. ಎಲ್. ಉಪಾಧ್ಯಾಯ, ಕಾಂ. ಎಂ.ಕೆ. ಭಟ್, ಕಾಂ. ಸೂರ್ಯನಾರಾಯಣರಾವ್, ಮತ್ತು ಅಖಿಲಭಾರತ ಕಿಸಾನ್‌ಸಭಾ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಚಾತುನ್ನಿ ಮಾಸ್ಟರ್ ಮಾತನಾಡಿದರು. ಕಾಂ. ಪಿ. ರಾಮಚಂದ್ರರಾವ್ ಅವರು ಸಮ್ಮೇಳನದ ನಿರ್ಣಯಗಳನ್ನು ವಿವರಿಸಿದರು. ಮಂಗಳೂರಿನಲ್ಲಿ ಜರುಗಿದ ಆರನೆ ಸಮ್ಮೇಳನವು ಎಲ್ಲಾ ವಿಧಗಳಿಂದಲೂ ಚಾರಿತ್ರಿಕವಾಗಿದ್ದು, ನಗರದಲ್ಲಿ ನಡೆದ ಪ್ರಚಾರ, ಮೆರವಣಿಗೆ ಮತ್ತು ಬಹಿರಂಗಸಭೆಗಳು ಸಂಘಟನೆಯು ಶೀಘ್ರಗತಿಯಲ್ಲಿ ಬೆಳೆಯುವುದರ ಮುನ್ಸೂಚಿಯಾಗಿವೆ.

ಮಂಗಳೂರು ಬಸ್ ದರ ಏರಿಕೆ ಖಂಡನೆ

ಖಾಸಗಿ ಬಸ್ ಮಾಲಿಕರ ವಿನಂತಿ ಮೇರೆಗೆ ಮಂಗಳೂರಿನ ಖಾಸಗಿ ಬಸ್ ದರಗಳು ತಾ|| 15-5-79ರಿಂದ ಹೆಚ್ಚಾಗುವ ಸಂಭವವು ಜನಸಾಮಾನ್ಯರ ಮತ್ತು ವಿದ್ಯಾರ್ಥಿಗಳ ಜೀವನದ ಮೇಲೆ ತೀವ್ರ ರೀತಿಯ ನೇರ ಪರಿಣಾಮ ಬೀರಲಿರುವುದರಿಂದ ದರ ಪರಿಷ್ಕರಣವನ್ನು ಉಳ್ಳಾಲ ಪ್ರದೇಶ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತ ಸಮಿತಿಯು ವಿರೋಧಿಸಿದೆ. ವಿದ್ಯಾರ್ಥಿಗಳಿಗೆ ನೀಡಲಾದ ಅರ್ಧ ದರ ರಿಯಾಯಿತಿಯನ್ನು ಈಗ ಶಾಲೆಗೆ ರಜೆ ಇರುವ ಸಂದರ್ಭದಲ್ಲಿ ಹಿಂತೆಗೆಯುವ ಯೋಜನೆಯು 'ವಿದ್ಯಾರ್ಥಿ ಸಮುದಾಯದ ಬೆನ್ನಿಗೆ ಇರಿದಂತೆ' ಮತ್ತು ತುರ್ತು ಪರಿಸ್ಥಿತಿಯ ಸಮಯದಲ್ಲಿ ಮಂಗಳೂರಲ್ಲಿ ಖಾಸಗಿ ಬಸ್ಸುಗಳ ದರ ಏರಿಕೆಯಾಗಿದ್ದು ಈಗ ಮತ್ತೊಮ್ಮೆ ದರ ಏರಿಕೆಯ ಪ್ರಯತ್ನ ಖಂಡನೀಯ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಸಮಿತಿಯು ಹೇಳಿದೆ.

ಸಂಪಾದಕೀಯ [ಒಂದನೇ ಪುಟದಿಂದ]

ದಲ್ಲಿನಂತೆ, ಇಲ್ಲೂ ಘಟನೆಗಳೆಲ್ಲಾ ನಡೆದಾಗ ಮುಂದಾಳುತ್ವ ವಹಿಸಿದ್ದ ವ್ಯಕ್ತಿ ಒಬ್ಬ ಆರ್. ಎಸ್. ಎಸ್. ನ ಪ್ರಮುಖ ಹಾಗು ಸ್ಥಳೀಯ ಶಾಸಕ. ಜಮ್‌ಶೆದ್‌ಪುರದಲ್ಲಿ ನಡೆದ ಹಿಂಸಾಚಾರಕ್ಕೆ ಬಿಹಾರ ಮಿಲಿಟರಿ ಪೋಲೀಸರೂ ಸಹಾಯವಿತ್ತರು. ಅಲ್ಪ ಸಂಖ್ಯಾತರ ಮೇಲೆ ನಡೆದ ಧಾಳಿಯು ಭೀಕರವಾಗಿತ್ತು. ಆರ್. ಎಸ್. ಎಸ್. ತನ್ನ ಪ್ರಭಾವವನ್ನು ಬೆಳೆಸಲು ಯೋಜನೆ ಹಾಕುತ್ತಿದ್ದಂತೆಲ್ಲಾ ಜನತಾಪಕ್ಷದೊಳಗೂ ಆರ್. ಎಸ್. ಎಸ್. ವಿರೋಧಿ ರಂಗವೂ ಬೆಳೆಯುತ್ತಲಿದೆ. ಜನತಾಪಕ್ಷದ ಒಳಜಗಳ ಗೊಂದಲಮಯವಾಗಿ ಕಂಡರೂ, ಆರ್.ಎಸ್.ಎಸ್. ನಂತ ಜಾತೀಯವಾದಿ, ಕೋಮುವಾದಿ ಶಕ್ತಿಯ ವಿರುದ್ಧ ಹೋರಾಟ ಬೆಳೆಯುವುದು ಸ್ವಾಗತಾರ್ಹ.

ಇಂದಿನ ಪರಿಸ್ಥಿತಿಯಲ್ಲಿ ಸರ್ವಾಧಿಕಾರ ಶಕ್ತಿಯ ವಿರುದ್ಧವೂ, ಜಾತೀಯ ಮತ್ತು ಕೋಮು ಶಕ್ತಿಗಳ ವಿರುದ್ಧ ಹೋರಾಡಲು ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ನಂಬುವ ಎಲ್ಲಾ ಶಕ್ತಿಗಳೂ ಒಂದಾಗಬೇಕಾಗಿದೆ. ಈ ದೃಷ್ಟಿಯಿಂದ ಇಂದಿರಾ ಕಾಂಗ್ರೆಸ್ಸಿನೊಳಗಿನ ತಿಕ್ಕಾಟ ಮತ್ತು ಜನತಾಪಕ್ಷದೊಳಗಿನ ತಿಕ್ಕಾಟಗಳನ್ನು ವೀಕ್ಷಿಸಿ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸುವ ಪ್ರಯತ್ನ ನಡೆಸಬೇಕಾಗಿದೆ.

ಉಳ್ಳಾಲದಲ್ಲಿ ನಾಗರಿಕರ ಸಭೆ

ಮಂಗಳೂರು, ಉಳ್ಳಾಲ-ತೊಕ್ಕೋಟಿನಲ್ಲಿ ತಾ. 22-4-79ನೇ ಆದಿತ್ಯವಾರ ಸಂಜೆ ಗಂಟೆ 5-30ಕ್ಕೆ ನಾಗರಿಕರ ಸಭೆಯೊಂದು ಶ್ರೀ ಎಂ. ಮಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ಯು. ಪಿ. ಡಿ' ಸೋಜರು ಸಭೆ ಕರೆದ ಉದ್ದೇಶವನ್ನು ವಿವರಿಸುತ್ತಾ, ಉಳ್ಳಾಲ ಮತ್ತು ಪೆರ್ಮನ್ನೂರು ಪಂಚಾಯತ್ ಕ್ಷೇತ್ರಗಳಲ್ಲಿ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾದುದನ್ನು ವಿವರಿಸಿದ ಬಳಿಕ ಸಭಿಕರು ಸಮಸ್ಯೆಗಳನ್ನು ಚರ್ಚಿಸಿ, ಶೀಘ್ರವಾಗಿ ಪರಿಹಾರಕ್ಕಾಗಿ ಪ್ರಯತ್ನಿಸುವ ಬಗ್ಗೆ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯ್ತು. ಸರಿಯಾದ ಬಸ್‌ನಿಲ್ದಾಣದ ವ್ಯವಸ್ಥೆ. ಸೀಮೆಎಣ್ಣೆ ಒದಗಿಸುವುದು, ಉಳ್ಳಾಲ ಸೇತುವೆ ದುರಸ್ಥಿ, ಮೀನು ಮಾರ್ಕೆಟಿನ ದುರಸ್ಥಿ, ನ್ಯಾಯ ಬೆಲೆಅಂಗಡಿ, ವಿದ್ಯುದ್ದೀಪ ವ್ಯವಸ್ಥೆ, ಚರಂಡಿ ವ್ಯವಸ್ಥೆ ಮೊದಲಾದುವುಗಳನ್ನು ಕೂಡಲೇ ಮಾಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಲಾಯಿತು.

ಪರಿಸರ

ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ್ದ ವಿನೋಭಾಭಾವೆಯವರ ಗೋಹತ್ಯೆ ನಿಷೇಧದ ಚಳುವಳಿಯು ಇಂದಿರಾಗಾಂಧಿಯವರಿಂದ ಪ್ರೇರಣೆಗೊಂಡದ್ದು.

—ಕೆ. ಚಂದ್ರಶೇಖರನ್
ಜನತಾಪಕ್ಷದ ಕೇರಳ ಘಟಕದ ಅಧ್ಯಕ್ಷರು.

ತಮ್ಮ ಮಗನನ್ನು ರಾಜಕೀಯದಲ್ಲಿ ಮೇಲಿನ ಹಂತಕ್ಕೆ ತರಬೇಕೆಂಬ ಇಂದಿರಾಗಾಂಧಿಯವರ ಪ್ರಯತ್ನ ಅವರಲ್ಲಿ ಹುದುಗಿರುವ "ಸರ್ವಾಧಿಕಾರಿ"ಯನ್ನು ಬಯಲಿಗೆಳೆದಿದೆ.

—ಚಂದ್ರಶೇಖರ್
ಜನತಾಪಕ್ಷದ ಅಧ್ಯಕ್ಷರು.

ಇಂದಿರಾಗಾಂಧಿಯವರಿಂದ ಮತ್ತು ಕರ್ನಾಟಕ ಜನತೆಯ ಆಶೀರ್ವಾದದಿಂದ ಮಾತ್ರ ನಾನು ಮುಖ್ಯಮಂತ್ರಿಯಾಗಿದ್ದೇನೆ.

—ದೇವರಾಜ ಅರಸು

ಕ್ಷೌರಿಕನೊಬ್ಬನ ಮಗನನ್ನು ಮುಖ್ಯಮಂತ್ರಿಯನ್ನಾಗಿ ಸಹಿಸುವ ಸ್ಥಿತಿಯಲ್ಲಿ ನಮ್ಮ ದೇಶದ ಮೇಲುಜಾತಿಯವರು ಮತ್ತು ಮೇಲುವರ್ಗದವರು ಇಲ್ಲ.

ಹಿಂದಿನ ಜನಸಂಘದವರು ಬಿಹಾರ್ ಮುಖ್ಯಮಂತ್ರಿ
ಕರ್ಪೂರಿಠಾಕೂರ್ ಅವರನ್ನು ಪದಚ್ಯುತಿಗೊಳಿಸಿದ ಬಗ್ಗೆ
—'ಕನ್ನಡಪ್ರಭ' ಸಂಪಾದಕೀಯ.

ಜನತಾಪಕ್ಷದ ಮುಸುಕಿನಲ್ಲಿಯೂ ಸ್ವಾರ್ಥ ರಾಜಕಾರಣಿಗಳ ಪ್ರಭಾವವೇ ಹೆಚ್ಚು

—'ಕನ್ನಡಪ್ರಭ'

ಮಕ್ಕಳನ್ನು ಸೆರೆಮನೆಯ ಬಂಧಿಗಳಂತೆ ಕುಳ್ಳಿರಿಸಿಕೊಂಡು ಉಪಾಧ್ಯಾಯರು ಕೊರೆಯುತ್ತಲೇ ಇರುತ್ತಾರೆ. ಅವರ ಅಭಿಪ್ರಾಯ, ಅಭಿರುಚಿ, ಆಸಕ್ತಿಗಳಿಗೆ ಅಲ್ಲಿ ಸ್ಥಾನವೇ ಇಲ್ಲ. ಇವನ್ನೆಲ್ಲಾ ಮಕ್ಕಳು ಸಹಿಸಲೇಬೇಕಾಗಿದೆ. ಮತ್ತು ನಮ್ಮ ಶಿಕ್ಷಣ ಯೋಜಕರು ಎಳೆಮಕ್ಕಳಿಗೆ ಮಹದನ್ಯಾಯವನ್ನೇ ಮಾಡಿದ್ದಾರೆ.

—ಮೈಸೂರು ವಿ. ವಿ. ಘಟಿಕೋತ್ಸವ ಭಾಷಣ ಮಾಡುತ್ತಾ
—ಡಾ|| ಶಿವರಾಮಕಾರಂತ

ಕರ್ನಾಟಕ ರಾಜ್ಯಸರಕಾರದ ಎಲ್ಲಾ 21 ಮಂತ್ರಿಗಳೂ ಮುಖ್ಯಮಂತ್ರಿಗೆ ಗುಲಾಮರಾಗಿದ್ದಾರೆ. ಒಟ್ಟು 21 ಮಂತ್ರಿಗಳ ಕೆಲಸ ಮಾಡುತ್ತಿರುವ ದೇವರಾಜ ಅರಸು ಧೀರರೇ ಸರಿ.

—ವಾಟಾಳ್ ನಾಗರಾಜ್
ಕನ್ನಡಚಳುವಳಿಯ ನಾಯಕ.

Printed by P. Ramachandra Rao at Nutan Printing Publishing & Training Centre, 415, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT